# ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 10 | ಮಾರ್ಚ್ 8, 1981 | ಬೆಲೆ : 50 ಪೈಸೆ

## ಮಾದರಿ ಬಂಗಾಳ ಸರಕಾರ

ಈಗ ಕೇಂದ್ರದಲ್ಲೂ ಮತ್ತು ರಾಜ್ಯಗಳಲ್ಲೂ ಮುಂದಿನ ಸಾಲಿನ ಆಯ-ವ್ಯಯ ಪಟ್ಟಿಯನ್ನು ಲೋಕಸಭೆಯಲ್ಲೂ, ಶಾಸನಸಭೆಗಳಲ್ಲೂ ಮಂಡಿಸಲಾಗುತ್ತಿದೆ. ಕೇಂದ್ರದ ಬಜೆಟ್‌ನಲ್ಲಿ ಮಧ್ಯಮವರ್ಗದ ನೌಕರರ ಮೇಲಿನ ಆದಾಯ ತೆರಿಗೆಯಲ್ಲಿ ಅಲ್ಪ ವಿನಾಯಿತಿ ದೊರೆತಿರುವುದಲ್ಲದೆ ಅದರ ಒಟ್ಟು ಪರಿಣಾಮ ಗುತ್ತೇದಾರಿ ಬಂಡವಾಳಶಾಹಿಗಳಿಗೆ ಇನ್ನೂ ಅಧಿಕ ಸೌಲಭ್ಯಗಳನ್ನು ಕೊಟ್ಟು ಅವರನ್ನು ಬೆಳೆಸುವುದಾಗಿದೆ. ರೈಲ್ವೇ ದರದಲ್ಲಿ ಏರಿಕೆ, ಉಕ್ಕಿನ ಬೆಲೆಯಲ್ಲಿ ಏರಿಕೆ ಮುಂತಾದ ಕ್ರಮಗಳಿಂದಲೂ, ಕೊರತೆ ಬಜೆಟ್‌ನಿಂದಲೂ ದೇಶದಲ್ಲಿ ಹಣದುಬ್ಬರ, ಬೆಲೆಏರಿಕೆ ಮುಂತಾದುವುಗಳಿಗೆ ಅವಕಾಶದೊರೆತು ಸಾಮಾನ್ಯ ಜನತೆಯ ಮೇಲೆ ಕೆಟ್ಟ ಹೊರೆ ಬೀಳಲಿದೆ. ಅವರಿಗೆ ಅನುಕೂಲ ಯಾವುದೂ ಇಲ್ಲ. ಇತರ ಕಾಂಗ್ರೆಸ್ (ಐ) ಪಕ್ಷದ ಸರ್ಕಾರವಿರುವ ರಾಜ್ಯಗಳಲ್ಲೂ ಜನಸಾಮಾನ್ಯರನ್ನು ಇನ್ನೂ ಹೆಚ್ಚಿನ ಬಡತನಕ್ಕೆ ತಳ್ಳುವ ಯೋಜನೆಗಳೇ ಇವೆ.

ಆದರೆ ಇತ್ತೀಚೆಗೆ ಮಂಡಿಸಲ್ಪಟ್ಟ ಪಶ್ಚಿಮ ಬಂಗಾಳದ ಆಯ-ವ್ಯಯ ಪಟ್ಟಿಯಲ್ಲಿ ಹಲವು ವೈಶಿಷ್ಟ್ಯಗಳಿವೆ. ಅದರಲ್ಲಿ 65 ಕೋಟಿ ರೂಪಾಯಿಯ ಖೋತಾ ತೋರಿಸಿದರೂ ಇದು ಹೋದವರ್ಷದ ಸಾಲ ಮಾತ್ರವಾಗಿದ್ದು ಅದನ್ನು ದೀರ್ಘಕಾಲದ ಸಾಲವನ್ನಾಗಿ ಪರಿಗಣಿಸಬೇಕೆಂದು ಕೇಂದ್ರವನ್ನು ಕೋರಲಾಗಿದೆ. ಈ ಸಲವೂ ನಿರುದ್ಯೋಗಿಗಳಿಗೆ

### ಸಂಪಾದಕೀಯ

ತಿಂಗಳಿಗೆ ರೂ. 50/- ಮಾಸಾಶನವನ್ನು ಮುಂದುವರಿಸಿದ್ದಲ್ಲದೆ, ತಿಂಗಳಿಗೆ ರೂ. 500/-ಕ್ಕಿಂತ ಕಡಿಮೆ ವರಮಾನವಿರುವ ಸ್ಕೂಲ್, ಕಾಲೇಜು ಮತ್ತು ಸ್ಥಳೀಯ ಸಂಸ್ಥೆಗಳ ನೌಕರರಿಗೆ, ಡಾಕ್ಟರರಿಗೆ, ವಕೀಲರಿಗೆ, ಚಿಕ್ಕ ವ್ಯಾಪಾರಸ್ಥರಿಗೆ ಗುಂಪಾಗಿ ವಿಮೆಮಾಡುವ ಯೋಜನೆಯನ್ನು ಮತ್ತು ವಿಮೆಯ ಮೂರು ವರ್ಷದ ಅವಧಿಯವರೆಗೆ ಕಂತುಗಳನ್ನು ಸರ್ಕಾರವೇ ಕಟ್ಟುವ ಯೋಜನೆ ತಯಾರಾಗಿದೆ. ಈ ಪರಿಹಾರ ಇಷ್ಟರವರೆಗೆ ಯಾವ ರಾಜ್ಯವಲ್ಲೂ ಇಲ್ಲ.

ಇನ್ನು ಸರ್ಕಾರದ ಆದಾಯವನ್ನು ಹೆಚ್ಚಿಸಲು ಜನತೆಯ ಮೇಲೆ ತೆರಿಗೆಹಾಕುವ ಬದಲು ಕಲ್ಲಿದ್ದಲು ಕಂಪನಿಗಳಿಂದ ಶೇ. 15ರಷ್ಟು ಸೆಸ್ ವಸೂಲುಮಾಡಲು ತೀರ್ಮಾನಿಸಿ ಇದರಿಂದ ರೂ. 60 ಕೋಟಿಯಷ್ಟು ಅಧಿಕ ಆದಾಯವನ್ನು ನಿರೀಕ್ಷಿಸಲಾಗಿದೆ. ಹಾಗೆನೇ ಸಣ್ಣ ಉದ್ಯಮಿಗಳಿಗೆ ಹೆಚ್ಚಿನ ರಿಯಾಯಿತಿಯನ್ನು ಕೊಡಲಾಗಿದೆ. ಈ ಬಜೆಟನ್ನು "ಹಿಂದೂ" ಪತ್ರಿಕೆಯೂ ಸಹ ಸ್ವಾಗತಿಸಿದೆ.

ಪಶ್ಚಿಮ ಬಂಗಾಳ ಸರ್ಕಾರದ ಶಿಕ್ಷಣ ನೀತಿಯ ಬಗ್ಗೆ ಪ್ರತಿಗಾಮಿಗಳು ಗುಲ್ಲೆಬ್ಬಿಸಿದರೂ 'ಕನ್ನಡ ಪ್ರಭಾ' ಪತ್ರಿಕೆಯು ತನ್ನ ಸಂಪಾದಕೀಯದಲ್ಲಿ ಹೃತ್ಪೂರ್ವಕವಾಗಿ ಸ್ವಾಗತಿಸಿ ಅದನ್ನು ಇತರ ರಾಜ್ಯಗಳೂ ಅನುಸರಿಸಬೇಕೆಂದಿದೆ.

ಎಲ್ಲ ಕ್ಷೇತ್ರಗಳಲ್ಲೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡಪಕ್ಷಗಳ ಈ ಸರ್ಕಾರವು ಇತರರಿಗೆ ಮಾದರಿಯಾಗಿದೆ. ಇದರಿಂದಲೇ ಅದನ್ನು ಉರುಳಿಸಲು ನಡೆಯುವ ಎಲ್ಲ ಪಿತೂರಿಗಳನ್ನು ಅಲ್ಲಿನ ಜನತೆಯೇ ವಿರೋಧಿಸುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ. ●

### ಸಿ. ಐ. ಟಿ. ಯು. ಮೂರನೇ ರಾಜ್ಯ ಸಮ್ಮೇಳನ

## ಕಾಂ. ರಣದಿವೆಯವರಿಂದ ಉದ್ಘಾಟನೆ

ಕರ್ನಾಟಕ ರಾಜ್ಯದ ನಡುಮಧ್ಯದಲ್ಲಿರುವ, ಪುಟ್ಟದಾದರೂ ಬಹಳ ಪ್ರಾಮುಖ್ಯವಾಗಿರುವ ಔದ್ಯಮಿಕ ಮಿಕ ಕೇಂದ್ರ ಹರಿಹರದಲ್ಲಿ 1981 ಮಾರ್ಚ್ 5ರಂದು ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಮೂರನೆ ಸಮ್ಮೇಳನವು ವಿಜೃಂಭಣೆಯಿಂದ ಪ್ರಾರಂಭವಾಯಿತು. ತುಂಗಭದ್ರ ನದಿ ತೀರದಲ್ಲಿರುವ ಕೆಂಪುಬಾವುಟ ಮತ್ತು ಕೆಂಪು ತೋರಣಗಳಿಂದ ಅಲಂಕೃತವಾಗಿದ್ದ ಬಿರ್ಲಾ ಕಲ್ಯಾಣ ಮಂಟಪದ ಆವರಣದಲ್ಲಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿ.ಐ.ಟಿ.ಯು.) ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣರಾವ್ ಅವರು ಧ್ವಜಾರೋಹಣ ಮಾಡುವುದರೊಂದಿಗ ಮೂರನೆ ಸಮ್ಮೇಳನವು ಪ್ರಾರಂಭವಾಯಿತು.

ಧ್ವಜಾರೋಹಣವಾದ ಮೇಲೆ ಕಲ್ಯಾಣಮಂಟಪದ ಒಳಗೆ ಸೇರಿದ ಸಭೆಯನ್ನು ಸ್ವಾಗತ ಸಮಿತಿಯ ಅಧ್ಯಕ್ಷ ಕಾಂ. ಇಕ್‌ಬಾಲ್ ಹುಸ್ಸೇನ್ ಸ್ವಾಗತಿಸಿದರು. ಹೋರಾಟದ ಕೇಂದ್ರ, ಕಾರ್ಮಿಕನಗರವಾದ ಹರಿಹರದಲ್ಲಿ ನಡೆಯುವ ಮೂರನೆ ಸಮ್ಮೇಳನಕ್ಕೆ ಬಂದ ಅತಿಥಿಗಳಿಗೆ, ಪ್ರತಿನಿಧಿಗಳಿಗೆ ಮತ್ತು ವೀಕ್ಷಕರು ಹಾಗೂ ಸೌಹಾರ್ದ ಪ್ರತಿನಿಧಿಗಳಿಗೆ ಹಾರ್ದಿಕ ಸ್ವಾಗತ ನೀಡಿದ ಕಾಂ. ಇಕ್‌ಬಾಲ್ ಅವರು, ಈ ಸಮ್ಮೇಳನವು ರಾಜ್ಯದ ಕಾರ್ಮಿಕವರ್ಗದ ಹೋರಾಟಕ್ಕೆ ನವಚೈತನ್ಯ ತುಂಬಲಿ ಎಂದು ಹಾರೈಸಿದರು. ಸ್ವಾಗತ ಭಾಷಣವಾದ ಮೇಲೆ ಕಾಂ. ಸೂರ್ಯನಾರಾಯಣರಾವ್ ಅವರ ಅಧ್ಯಕ್ಷತೆಯಲ್ಲಿ ಪ್ರತಿನಿಧಿ ಸಭೆ ಪ್ರಾರಂಭವಾಯಿತು. ಅಗಲಿದ ಸಂಗಾತಿಗಳಿಗೆ, ಕಾರ್ಮಿಕ ಮುಂದಾಳುಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವ ನಿರ್ಣಯವನ್ನು ಕಾಂ. ಎನ್.ಕೆ. ಉಪಾಧ್ಯಾಯ ಮಂಡಿಸಿದರು. ಎದ್ದುನಿಂತು ಮೌನ ಆಚರಿಸುವುದರೊಂದಿಗೆ ಸಂತಾಪ ಸೂಚಿಸಲಾಯಿತು.

ಬಳಿಕ, ಸಿ.ಐ.ಟಿ.ಯು. ಮೂರನೆ ರಾಜ್ಯಸಮ್ಮೇಳನವನ್ನು ಉದ್ಘಾಟಿಸುತ್ತಾ ಶೋಷಣಾರಹಿತ ಸಮಾಜವನ್ನು ಸ್ಥಾಪಿಸಲು ಮತ್ತು ತಮ್ಮ ದಿನನಿತ್ಯದ ಬೇಡಿಕೆಗಳಿಗಾಗಿ ಹೋರಾಡಲು ಜನತೆಯೊಂದಿಗೆ ಸೇರಿ ಐಕ್ಯ ಚಳುವಳಿ ನಡೆಸಲು ಸಿ.ಐ.ಟಿ.ಯು. ಅಧ್ಯಕ್ಷ, ಕಾರ್ಮಿಕಚಳುವಳಿಯ ಅಗ್ರ ನಾಯಕ ಕಾಂ. ಬಿ. ಟಿ. ರಣದಿವೆ ಕಾರ್ಮಿಕವರ್ಗಕ್ಕೆ ಕರೆಇತ್ತರು (ಭಾಷಣದ ಪೂರ್ಣ ವಿವರ ಒಳಪುಟದಲ್ಲಿದೆ). ಕಾಂ. ರಣದಿವೆ ಅವರ ಭಾಷಣ ಮೊದಲನೆಯ ಸಿ.ಐ.ಟಿ.ಯು. ರಾಜ್ಯ ಸಮಿತಿಯ ಪ್ರಧಾನಕಾರ್ಯದರ್ಶಿ ಕಾಂ. ಸಿ. ಸಂಜುಂಡಪ್ಪ ಅವರು ಲಿಖಿತ ವರದಿಯನ್ನು ಮಂಡಿಸುವುದರೊಂದಿಗೆ ಉದ್ಘಾಟನಾ ಸಮಾರಂಭ ಮುಕ್ತಾಯವಾಯಿತು. 6 ರಂದು ಬೆಳಿಗ್ಗೆಯಿಂದ ವರದಿಯ ಮೇಲೆ ಚರ್ಚೆ ಪ್ರಾರಂಭವಾಗಿದೆ. ಪ್ರತಿನಿಧಿಗಳು, ಸೌಹಾರ್ದ ಪ್ರತಿನಿಧಿಗಳು ಮತ್ತು ವೀಕ್ಷಕರೂ ಸೇರಿ ಸುಮಾರು 300 ಮಂದಿ ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದಾರೆ. ಕೆಂಪು ತೋರಣಗಳಿಂದ ಅಲಂಕೃತವಾಗಿರುವ ಹರಿಹರ ನಗರವು ಸಮ್ಮೇಳನಕ್ಕೆ ಬಂದವರಿಗೆ ಸ್ಫೂರ್ತಿಯೀಯುತ್ತಿದೆ. ಸ್ವಯಂಸೇವಕರು ಸಮ್ಮೇಳನದ ಯಶಸ್ಸಿಗಾಗಿ ಮತ್ತು ರಾಜ್ಯದಲ್ಲೆಡೆಗಳಿಂದ ಬಂದಿರುವ ಸಂಗಾತಿಗಳ ವ್ಯವಸ್ಥೆ ಬಗ್ಗೆ ಅತ್ಯಂತ ಶ್ರದ್ಧೆಯಿಂದ ದುಡಿಯುತ್ತಿದ್ದಾರೆ. ●

## ರೈತ - ಕಾರ್ಮಿಕ ಚಳುವಳಿಯನ್ನು ಮುನ್ನಡೆಸಲು ರಾಜ್ಯಸಮಿತಿ ಕರೆ

ನಾಲ್ಕು ಪಕ್ಷಗಳ ನೇತೃತ್ವದಲ್ಲಿ ನಡೆದ ಯಶಸ್ವಿ ರೈತ ಜಾಥಾ ಮತ್ತು ಬೆಂಗಳೂರಿನಲ್ಲಿ ನಡೆದ ಚಾರಿತ್ರಿಕ ಪ್ರತಿಭಟನಾ ಪ್ರದರ್ಶನವನ್ನು ವಿಮರ್ಶಿಸಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಸಭೆಯು, ಮಾರ್ಚ್ 23ರಂದು ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾಧಿಕಾರಿಗಳ ಕಛೇರಿಗಳೆದುರು ನಡೆಯಲಿರುವ ರೈತ-ಕಾರ್ಮಿಕರ ಧರಣಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ತನ್ನೆಲ್ಲಾ ಘಟಕಗಳಿಗೆ ಕರೆ ಇತ್ತಿದೆ. ನಾಲ್ಕು ಪಕ್ಷಗಳ "ರೈತ ಕಾರ್ಮಿಕ ಹೋರಾಟ ಸಮಿತಿ"ಯ ನೇತೃತ್ವದಲ್ಲಿ ಜಿಲ್ಲಾ ಕೇಂದ್ರಗಳಲ್ಲಿ ನಡೆಯಲಿರುವ ಧರಣಿ ಕಾರ್ಯಕ್ರಮದಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ರೈತರು, ಹಳ್ಳಿಯ ಬಡವರು ಮತ್ತು ಕಾರ್ಮಿಕರನ್ನು ಸೇರಿಸಿ, ಇತರೆ ಜನವಿಭಾಗದ ಬೆಂಬಲ ಪಡೆದು ಸರ್ಕಾರದ ಮೇಲೆ ಒತ್ತಾಯ ತರಬೇಕೆಂದೂ, ಹೋರಾಟವನ್ನು ಚುರುಕುಗೊಳಿಸಿ ಮುನ್ನಡೆಸಲು ಶ್ರಮಿಸಬೇಕೆಂದು ತನ್ನೆಲ್ಲಾ ಘಟಕಗಳಿಗೆ ರಾಜ್ಯ ಸಮಿತಿಯು ಕರೆ ಈಯುತ್ತದೆ. ಫೆಬ್ರುವರಿ 27 ಮತ್ತು 28ರಂದು ಬೆಂಗಳೂರಿನಲ್ಲಿ ಸೇರಿದ್ದ ಪಕ್ಷದ ರಾಜ್ಯಸಮಿತಿ ಸಭೆಯು ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ವಿಮರ್ಶಿಸಿ, ಎಡ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯನ್ನು ಮತ್ತು ಜನತೆಯ ಐಕ್ಯ ಹೋರಾಟವನ್ನು ಬಲಪಡಿಸಲು ಕರೆ ಇತ್ತಿದೆ.

ಸಾರ್ವಜನಿಕ ಕ್ಷೇತ್ರದ ನೌಕರರ ಹೋರಾಟಕ್ಕೆ ತನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದ ರಾಜ್ಯಸಮಿತಿ ಸಭೆಯು, ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿತು. ತಕ್ಷಣವೇ ಮಧ್ಯ ಪ್ರವೇಶ ಮಾಡಿ ಬೇಡಿಕೆಗಳನ್ನು ಈಡೇರಿಸುವಂತೆಯೂ, ಕಾರ್ಮಿಕ ವಿರೋಧಿ ನೀತಿಗಳನ್ನು ಕೈ ಬಿಡುವಂತೆಯೂ ಸರ್ಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಮಾಡಲಾಯಿತು.

ಕೇಪಿಟೇಶನ್ ಫೀಸು ರದ್ದಾಗಬೇಕೆಂದು ವೈದ್ಯಕೀಯ ವಿದ್ಯಾರ್ಥಿಗಳು ನಡೆಸುತ್ತಿರುವ ಮುಷ್ಕರಕ್ಕೆ ಸಂಪೂರ್ಣ ಬೆಂಬಲ ಸೂಚಿಸಿದ ರಾಜ್ಯಸಮಿತಿಯು, ಮುಷ್ಕರ ನಿರತ ವೈದ್ಯಕೀಯ ವಿದ್ಯಾರ್ಥಿಗಳ ಮೇಲೆ ನಡೆಸಲಾಗುತ್ತಿರುವ ಗೂಂಡಾಗಿರಿಯನ್ನು ಖಂಡಿಸಿತು. ಕೇಪಿಟೇಶನ್ ಫೀಸು ರದ್ದು ಮಾಡುವಂತೆ ಸರ್ಕಾರವನ್ನು ಒತ್ತಾಯಿಸುವ ನಿರ್ಣಯ ಮಾಡಲಾಯಿತು.

ಕಾಲೇಜುಗಳಿಗೆ ಮಾನ್ಯತೆ ಕೊಡಲು ವಿಶ್ವವಿದ್ಯಾಲಯಗಳಿರುವ ಹಕ್ಕನ್ನು ಸುಗ್ರೀವಾಜ್ಞೆ ಮೂಲಕ ರಾಜ್ಯ ಸರಕಾರವು ಕಸಿದುಕೊಂಡುದನ್ನು ಖಂಡಿಸಿದ ರಾಜ್ಯಸಮಿತಿಯು, ಸರ್ವಾಧಿಕಾರ ಕ್ರಮಗಳನ್ನು ವಿರೋಧಿಸಲು ಎಲ್ಲಾ ಪ್ರಗತಿಪರ, ಪ್ರಜಾಪ್ರಭುತ್ವ ಶಕ್ತಿಗಳಿಗೆ ಕರೆ ಇತ್ತಿತು.

ಶಿವಮೊಗ್ಗ ಜಿಲ್ಲೆಯಲ್ಲಿ ವಹಾಹಿ ಯೋಜನೆಯಿಂದಾಗಿ ಮುಳುಗಡೆಯಾಗಿ ಕಷ್ಟಕ್ಕೊಳಗಾಗುವ ಜನತೆಯು ನಡೆಸುತ್ತಿರುವ ಹೋರಾಟಕ್ಕೆ ರಾಜ್ಯ ಸಮಿತಿಯು ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿತು.

ಇತ್ತೀಚೆಗಿನ ದಿನಗಳಲ್ಲಿ ರಾಜ್ಯದಲ್ಲಿ ಕೋಮು ಶಕ್ತಿಗಳು ತಲೆಎತ್ತಿ ಮಶೀಯ ಮತ್ತು ಕೋಮು ಗಲಭೆಗಳನ್ನು ಪ್ರಚೋದಿಸುತ್ತಿರುವುದನ್ನು ರಾಜ್ಯಸಮಿತಿಯು ಗಂಭೀರವಾಗಿ ಪರಿಗಣಿಸಿತು. ಶಿವಮೊಗ್ಗ ಜಿಲ್ಲೆಯಲ್ಲಿ ನಡೆದಿರುವ ಕೋಮು ಗಲಭೆಯನ್ನು ಪ್ರಚೋದಿಸಿರುವ ಶಕ್ತಿಗಳನ್ನು ಖಂಡಿಸಿದ ರಾಜ್ಯಸಮಿತಿಯು ಮತೀಯ ಮತ್ತು ಕೋಮು ಸೌಹಾರ್ದತೆ

[ಕಡೇ ಪುಟ ನೋಡಿ]

### ಶೋಷಣೆಯನ್ನು ಕೊನೆಗೊಳಿಸಲು

# ಜನತೆಯ ಐಕ್ಯಹೋರಾಟಗಳಲ್ಲಿ ಸಹಭಾಗಿಗಳಾಗಿ

**(೫-೩-೮೧ರಿಂದ ಆರಂಭವಾಗಿರುವ ಕರ್ನಾಟಕ ರಾಜ್ಯ ಸಿ.ಐ.ಟಿ.ಯು.ವಿನ ಮೂರನೇ ರಾಜ್ಯಸಮ್ಮೇಳನವನ್ನು ಉದ್ಘಾಟಿಸುತ್ತಾ ಮಾತನಾಡಿದ ಸಿ.ಐ.ಟಿ.ಯು. ಅಧ್ಯಕ್ಷ ಕಾಂ. ಬಿ.ಟಿ. ರಣದಿವೆಯವರ ಭಾಷಣದ ಸಂಗ್ರಹಾನುವಾದ)**

ಒಡನಾಡಿಗಳೆ,

ಸಿ.ಐ.ಟಿ.ಯು.ವಿನ ಕರ್ನಾಟಕ ರಾಜ್ಯಸಮಿತಿಯ ಮೂರನೇ ಸಮ್ಮೇಳನದ ಈ ಸಂದರ್ಭದಲ್ಲಿ ನಿಮ್ಮ ಮಧ್ಯೆ ನಾನಿರುವುದಕ್ಕೆ ಸಂತೋಷವಾಗುತ್ತಿದೆ. ಇತ್ತೀಚಿನ ತಿಂಗಳುಗಳಲ್ಲಿ ನಮ್ಮ ಸಂಘಟನೆಯು ಸಾಧಿಸಿರುವ ಅಸಾಧಾರಣ ಪ್ರಗತಿಯ ಹಿನ್ನೆಲೆಯಲ್ಲಿ ನೀವುಗಳೆಲ್ಲರೂ ಇಲ್ಲಿ ಸೇರಿರುವುದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ನಮ್ಮ ನಾಯಕರು ಹಾಗೂ ಒಡನಾಡಿಗಳ ನಿಸ್ವಾರ್ಥ ಹಾಗೂ ತ್ಯಾಗಮಯ ಸೇವೆಯಿಂದಲ್ಲದೆ ನಮ್ಮ ಈ ಪ್ರಗತಿಯು ಸಾಧ್ಯವಾಗುತ್ತಿರಲಿಲ್ಲ. ನಮ್ಮ ಅಸಂಖ್ಯಾತ ಕಾರ್ಮಿಕ ಒಡನಾಡಿಗಳು ಕೆಲಸ ಕಳೆದುಕೊಳ್ಳುವುದು, ಅನೇಕ ಕಿರುಕುಳಗಳಿಗೆ ಬಲಿಯಾಗುವುದು, ಪೋಲೀಸರ ದೌರ್ಜನ್ಯ, ಬಂಧನಗಳಿಂದಾಗಿ ತಮ್ಮ ಇಡೀ ಕುಟುಂಬವೇ ಹೊಟ್ಟೆಗಿಲ್ಲದೇ ನರಳುವುದು ಮುಂತಾದವುಗಳಿಗೆ ಒಳಗಾಗಿದ್ದಾರೆ. ಕಾರ್ಮಿಕರು ಮತ್ತು ತಮ್ಮ ಕಾರ್ಮಿಕ ಸಂಘಟನೆಯ ಅನೇಕ ಪ್ರಮುಖ ಮುಖಂಡರುಗಳು ಕೊಲೆ ಮುಂತಾದ ಅಪಾದನೆಗಳಿಗಾಗಿ ಸುಳ್ಳು ಕ್ರಿಮಿನಲ್ ಮೊಕದ್ದಮೆಗಳನ್ನು ಎದುರಿಸುತ್ತಿದ್ದಾರೆ.

ಕಾರ್ಮಿಕ ಸಂಘಟನಾ ಚಳುವಳಿಯು ಹೂವಿನ ಹಾಸಿಗೆ ಎಂದು ತಿಳಿಯುವವರು ಬಹಳವಾಗಿ ಅಬ್ಬರಿಸುವ ಸಂವಿಧಾನಾತ್ಮಕ ಸ್ವಾತಂತ್ರ್ಯಗಳಿದ್ದರೂ ಕಾರ್ಮಿಕರು ಹಾಗೂ ಕಾರ್ಮಿಕ ನಾಯಕರುಗಳು ಎದುರಿಸಬೇಕಾದ ಹಲವಾರು ತೊಂದರೆಗಳ ಕಡೆ ತಮ್ಮ ಗಮನಹರಿಸಬೇಕಾಗಿದೆ.

ಕಾರ್ಮಿಕರ ಹಕ್ಕನ್ನು ರಕ್ಷಿಸುತ್ತಾ ಪೋಲೀಸರ ದೌರ್ಜನ್ಯಕ್ಕೆ ಬಲಿಯಾದ ಎಲ್ಲರಿಗೂ ನನ್ನ ಪ್ರಣಾಮಗಳನ್ನು ಅರ್ಪಿಸುತ್ತೇನೆ. ಇವರುಗಳು ನಮ್ಮ ಸಂಘಟನೆಗೆ ಸೇರಿರಬಹುದು ಅಥವಾ ಬೇರೆ ಇನ್ನಿತರ ಸಂಘಟನೆಗಳಿಗೆ ಸೇರಿರಬಹುದು. ಅವರ ಬಲಿದಾನ ಖಂಡಿತ ನಿರರ್ಥಕವಾಗುವುದಿಲ್ಲ.


ಮೊದಲೇ ಒಪ್ಪಿದ್ದ ಇತ್ಯರ್ಥದನ್ವಯ ಹೆಚ್ಚುವರಿ ಕೂಲಿಗಾಗಿ ನ್ಯಾಯವಾದ ಹೋರಾಟ ನಡೆಸಿರುವ ಬೆಂಗಳೂರು, ಹೈದರಾಬಾದ್ ಮತ್ತಿತರ ಸ್ಥಳಗಳ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರನ್ನು ಅಭಿನಂದಿಸುತ್ತೇನೆ.

ಈ ಕಾರ್ಮಿಕರು ತೋರಿರುವ ಐಕ್ಯತೆ ಹಾಗೂ ತಾಳ್ಮೆ ಕಾರ್ಮಿಕರಂಗದ ಎಲ್ಲ ವಿಭಾಗಗಳಿಂದಲೂ ಪ್ರಶಂಸೆಗಳಿಸಿದೆ. ಅವರ ಬೇಡಿಕೆಗಳು ನ್ಯಾಯಯುತವೆಂದು ಎಲ್ಲರೂ ಮನಗಂಡಿದ್ದಾರೆ. ಆದರೆ ಇಂದಿರಾ ಸರ್ಕಾರ ಹಾಗೂ ಅವರ ಬೇಜವಾಬ್ದಾರಿ ಸಚಿವ ಸ್ಟೀಫನ್‌ರವರುಗಳು ಲಿಖಿತ ಇತ್ಯರ್ಥವನ್ನು ತಿರಸ್ಕರಿಸುವ ಹಾದಿ ಹಿಡಿದಿದ್ದಾರೆ. ಚುನಾವಣೆಗಳ ಸಮಯದಲ್ಲಿ ನೀಡುವ ಆಶ್ವಾಸನೆಗಳನ್ನು ಧಿಕ್ಕರಿಸುವುದೇ ದಂಧೆಯಾಗಿರುವ ಇವರುಗಳು ಈಗ ಕಾರ್ಮಿಕರೊಂದಿಗೆ ಆಗಿರುವ ಲಿಖಿತ ಒಪ್ಪಂದವನ್ನು ಮುರಿಯಲು ಹೊರಟಿದ್ದಾರೆ.

ಒಡನಾಡಿಗಳೆ- ಇಂದಿರಾ ಸರ್ಕಾರವು 1980ರಲ್ಲಿ ಪುನಃ ಅಧಿಕಾರಕ್ಕೆ ಬಂದ ಮೇಲೆ ಅನುಸರಿಸುತ್ತಿರುವ ಕಾರ್ಮಿಕನೀತಿ ನಮ್ಮ ಮುಂದಿದೆ. ಈ ರಾಜ್ಯದ ಬಹುಸಂಖ್ಯಾತ ಮತದಾರರು 1980ರ ಪಾರ್ಲಿಮೆಂಟ್ ಚುನಾವಣೆಗಳಲ್ಲಿ ಅಧಿಕಾರಶಾಹಿ ಪಕ್ಷಕ್ಕೆ ಮತ ನೀಡಿದರು. ಕಾಂಗ್ರೆಸ್ (ಐ) ಪಕ್ಷವು ಕೈಗಾರಿಕಾ ಕಾರ್ಮಿಕರು ಮತ್ತು ನೌಕರರುಗಳು ನಿರ್ಣಾಯಕ ಸಂಖ್ಯೆಯಲ್ಲಿರುವ ಕ್ಷೇತ್ರಗಳಲ್ಲೂ ಜಯಭೇರಿ ಹೊಡೆಯಿತು. ತುರ್ತುಸ್ಥಿತಿಯನ್ನು ಹೇರುವ ದಿನಗಳು ದೂರವಿಲ್ಲ. ಕಾರ್ಮಿಕ ಸಂಘಟನೆಯ ಪ್ರತಿಯೊಂದು ವಿವಾದವನ್ನೂ ಶಿಸ್ತು ಮತ್ತು ಕಾನೂನಿನ ಪ್ರಶ್ನೆಯೆಂದು ಪರಿಗಣಿಸುತ್ತಿರುವ ಈ ಸರ್ಕಾರದ ಕಾರ್ಮಿಕನೀತಿಯಲ್ಲಿ ಇದನ್ನು ಮನಗಾಣಬಹುದು.

ಇಂದಿರಾ ಸರ್ಕಾರವು ಅಧಿಕಾರಕ್ಕೆ ಬಂದಕೂಡಲೇ ವಾಣಿಜ್ಯ ಮಂಡಳಿಗಳ ಮಹಾಸಂಘ, ದೊಡ್ಡ ಬಂಡವಾಳಗಾರರ ಹಾಗೂ ಗುತ್ತೇದಾರಿ ಸಂಸ್ಥೆಗಳ ಮುಖವಾಣಿಯಾದ ಅಖಿಲ ಭಾರತ ಉದ್ಯೋಗಪತಿಗಳ ಸಂಘಟನೆಯ ಮೂಲಕ ಕಾರ್ಮಿಕ ಚಳುವಳಿಯ ಹೋರಾಟದ ಮನೋಭಾವನೆಯ ವಿಭಾಗವನ್ನು ಹತ್ತಿಕ್ಕುವ ಬೇಡಿಕೆಯನ್ನು ಮುಂದಿಟ್ಟಿತು. ಕಳೆದ ಒಂದು ವರ್ಷದ ಅವಧಿಯಲ್ಲಿ ರಾಜ್ಯಗಳಲ್ಲಿರುವ ಕಾಂಗ್ರೆಸ್ ಸರ್ಕಾರವು ಕೇಂದ್ರಸರ್ಕಾರದ ಉತ್ತೇಜನ ಹಾಗೂ ಸಹಾಯದೊಂದಿಗೆ ಈ ಬೇಡಿಕೆಯನ್ನು ಈಡೇರಿಸುವಲ್ಲಿ ಹಲವಾರು ತೀವ್ರ ಕ್ರಮಗಳನ್ನು ಕೈಗೊಂಡಿರುವುದರಲ್ಲಿ ಯಾವುದೇ ಸಂಶಯವಿಲ್ಲ.

ರಾಷ್ಟ್ರೀಯ ಭದ್ರತಾ ಶಾಸನವನ್ನು- ತುರ್ತುಪರಿಸ್ಥಿತಿಯ ಮೀಸಾದ ಹೊಸ ಹೆಸರು. ಸಮಾಜವಿರೋಧಿ ಶಕ್ತಿಗಳ ವಿರುದ್ಧ ಮಾತ್ರ ಉಪಯೋಗಿಸುತ್ತೇವೆಂಬ ದೃಢ ಆಶ್ವಾಸನೆಕೊಟ್ಟು, ಲೋಕೋ ಸಿಬ್ಬಂದಿ ಹಾಗೂ ಇನ್ನಿತರ ಮುಷ್ಕರನಿರತ ಕಾರ್ಮಿಕರ ವಿರುದ್ಧ ಉಪಯೋಗಿಸಲಾಗಿದೆ. ಕಾರ್ಮಿಕರ ಬೆಂಬಲ ಇಲ್ಲದಿರುವ ಕಾಂಗ್ರೆಸ್ ಕಾರ್ಮಿಕಸಂಘಟನೆಗಳ ಜೊತೆ ಮಾಡಿಕೊಂಡಿರುವ ಒಪ್ಪಂದವನ್ನು ಎಲ್ಲ ಕಾರ್ಮಿಕರ ಮೇಲೆ ಹೇರಲಾಗುತ್ತಿದೆ. ಕಾರ್ಮಿಕರನ್ನು ಭಯಗ್ರಸ್ಥರನ್ನಾಗಿಸಲು ಯೂತ್ ಕಾಂಗ್ರೆಸ್ ಲೇಬಲ್ ಇರುವ ರೌಡಿಗಳನ್ನು ಉಪಯೋಗಿಸಲಾಗುತ್ತಿದೆ. ಎಲ್.ಐ.ಸಿ. ಸುಗ್ರೀವಾಜ್ಞೆಯು ಕಾರ್ಮಿಕರ ವಿರುದ್ಧ ತುರ್ತುಪರಿಸ್ಥಿತಿ ಆಳ್ವಿಕೆಯ ಪ್ರಾರಂಭದ ಸಂಕೇತವಾಗಿದೆ.



ಬಿ. ಟಿ. ರಣದಿವೆ

ಇಂದಿರಾ ಸರ್ಕಾರವು ಕಾರ್ಮಿಕರ ವಿರುದ್ಧ ಹೊಂದಿರುವ ಸೇಡಿನ ಹಾಗೂ ಅನಾಗರಿಕ ವರ್ತನೆಯನ್ನು ಮುಷ್ಕರನಿರತ ಲೋಕೋ ಸಿಬ್ಬಂದಿಯನ್ನು ನಡೆಸಿಕೊಂಡ ರೀತಿಯಲ್ಲಿ ಕಾಣಬಹುದು. ಇದೇ ಸರ್ಕಾರವು 1973ರಲ್ಲಿ ಮುಷ್ಕರನಿರತ ಲೋಕೋ ಸಿಬ್ಬಂದಿಯೊಂದಿಗೆ 10 ಘಂಟೆ ಕೆಲಸದ ಅವಧಿಯ ಕೆಲಸದ ಒಪ್ಪಂದಕ್ಕೆ ಬಂದಿತ್ತು. ಆದರೆ ಏಳು ವರ್ಷಗಳ ನಂತರವೂ ಯಾವುದೇ ಆಶ್ವಾಸನೆಯನ್ನು ಜಾರಿಗೆ ತರಲಿಲ್ಲ. ಕೆಲಸದ ಅವಧಿ, ವೇತನ ಸ್ವರೂಪದ ಪುನರ್‌ರಚನೆ ಮತ್ತಿತರ ಬೇಡಿಕೆಗಳನ್ನು ಜಾರಿಗೆ ತಂದಿಲ್ಲ. ಆಡಳಿತವರ್ಗವು ಕಾರ್ಮಿಕರ ಸಂಘಟನೆಯನ್ನು ಒಡೆಯಲು ಒಳಸಂಚು ನಡೆಸುತ್ತಿದೆ. ತಲಚೇರ್ ಎಂಬಲ್ಲಿ ರೈಲ್ವೆ ಕಾಂಟ್ರಾಕ್ಟರುಗಳು ರೈಲ್ವೆ ನೌಕರರ ಹೆಂಡಂದಿರ ಮಾನಭಂಗ ಮಾಡಿದರು. ಇದನ್ನು ವಿರೋಧಿಸಿದ ಕಾರ್ಮಿಕರನ್ನು ಕೆಲಸದಿಂದ ವಜಾಮಾಡಲಾಯಿತು. ಎಲ್.ಎಸ್.ಆರ್.ಎ. (LSRA)ನ ಹೆಚ್ಚುಕಮ್ಮಿ ಎಲ್ಲ ಅಧಿಕಾರವರ್ಗದವರನ್ನು ಕೆಲಸದಿಂದ ಸಸ್ಪೆಂಡ್ ಅಥವಾ ವಜಾಮಾಡಿ ಲೋಕೋ ಸಿಬ್ಬಂದಿಯು ಸಾಮೂಹಿಕ ರಜವನ್ನು ಹಾಕುವಂತೆಮಾಡಿತು. ವಿವಾದವನ್ನು ಬಗೆಹರಿಸುವ ಬದಲು ಎನ್.ಎಸ್.ಎ. ಶಾಸನದನ್ವಯ ಕಾರ್ಮಿಕರನ್ನು ದಸ್ತಗಿರಿಮಾಡಲು ಮುಂದಾಯಿತು.

ಈ ಹಿಂದೆಯೇ ಆದ ಒಪ್ಪಂದದ ಅನ್ವಯ ಎಲ್.ಐ.ಸಿ. ಕಾರ್ಮಿಕರಿಗೆ ಬೋನಸ್ ನೀಡುವುದರ ಬದಲು ಈ ದಿಸೆಯಲ್ಲಿ ಸರ್ವೋಚ್ಚ ನ್ಯಾಯಾಲಕ ನೀಡಿದ ನಿರ್ದೇಶನ ಹಾಗೂ ತೀರ್ಪನ್ನು ಧಿಕ್ಕರಿಸುವಂಥ ಸುಗ್ರೀವಾಜ್ಞೆಯನ್ನು ತರುವುದರ ಮೂಲಕ ಇಂದಿರಾ ಸರ್ಕಾರ ಇನ್ನೊಂದು ಹಗರಣ ಹುಟ್ಟುಹಾಕಿತ್ತು. ಯಾವುದೇ ಬದಲಾವಣೆಯನ್ನು ತರುವುದಾದರೆ ಈ ನಿಟ್ಟಿನಲ್ಲಿ ಎಲ್.ಐ.ಸಿ. ಕಾರ್ಮಿಕ ಸಂಘಟನೆಯೊಡನೆ ಮಾತುಕತೆ ನಡೆಸುವಂತೆ ಸರ್ವೋಚ್ಚ ನ್ಯಾಯಾಲಯ ಎಲ್.ಐ.ಸಿ. ಆಡಳಿತ ವರ್ಗವನ್ನು ಕೇಳಿತ್ತು. ಸರ್ಕಾರವು ಒಪ್ಪಂದದ ಮತ್ತು ಸಾಮೂಹಿಕ ಹೋರಾಟದ ಎಲ್ಲ ಪಾವಿತ್ರತೆಯನ್ನು ಗಾಳಿಗೆ ತೂರಿ ಏಕಪಕ್ಷೀಯವಾಗಿ ತಾನು ನಿಗದಿಪಡಿಸುವ ಸಂಬಳ ಮತ್ತು ಕೆಲಸದ ನಿಯಮಗಳನ್ನು ನೌಕರರ ಮೇಲೆ ಹೇರುವ ಅಧಿಕಾರ ಹೊಂದಿತು. ಎಲ್.ಐ.ಸಿ. ಆಡಳಿತ ವರ್ಗ ಹಾಗೂ ಸರ್ಕಾರದ ಎಲ್ಲಾ ಅನ್ಯಾಯದ ವಿರುದ್ಧ ನ್ಯಾಯಾಲಯಕ್ಕೆ ಮೊರೆ ಹೋಗುವ ಕಾರ್ಮಿಕನ ಹಕ್ಕನ್ನು ಲೇವಡಿಮಾಡಿತು. ಈ ಸುಗ್ರೀವಾಜ್ಞೆ ಹೆಚ್ಚು ಸಂಬಳ ಪಡೆಯುವ ಎಲ್ಲ ಕಾರ್ಮಿಕರ ವಿರುದ್ಧವೂ ಮತ್ತು ಕೊನೆಯಲ್ಲಿ ಇಡೀ ಕಾರ್ಮಿಕ ವಿರುದ್ಧವೂ ನಡೆಸುವ ದಾಳಿಯ ಮುನ್ಸೂಚನೆಯಾಗಿದೆ. ಸಂಘಟನೆಯ ಹಕ್ಕಿನ ವಿರುದ್ಧ ಅಧಿಕಾರಶಾಹಿ ದಾಳಿಯು ವ್ಯವಸ್ಥಿತವಾಗಿ ಪ್ರಾರಂಭವಾಗಿದೆ. ಸರ್ಕಾರವು ನೌಕರರ ಸಂಬಳ, ಕೆಲಸದ ನಿಯಮಗಳನ್ನು ಏಕಪಕ್ಷೀಯವಾಗಿ ನಿರ್ಧರಿಸುವುದರ ಮೂಲಕ ಕಾರ್ಮಿಕವರ್ಗವನ್ನು ಹಕ್ಕಿಲ್ಲದ ದುಡಿಯುವ ಸಮೂಹವನ್ನಾಗಿ ಮಾಡಲು ಮುಂದಾಗಿದೆ. ಈ ಸುಗ್ರೀವಾಜ್ಞೆಯು ಈಗ ಕೇವಲ ಎಲ್.ಐ.ಸಿ. ನೌಕರರಿಗೆ ಮಾತ್ರ ಸೀಮಿತವಾಗಿದ್ದರೂ ಅವರ ಮಹತ್ವ ಇದರಲ್ಲಡಗಿದೆ. ಈ ಆಜ್ಞೆಯು ಸರ್ಕಾರಕ್ಕೆ ನೀಡುವ ಅಧಿಕಾರವನ್ನು ವ್ಯಾಪಕವಾಗಿ ಬಳಸಿದಲ್ಲಿ ಎಲ್ಲ ಕಾರ್ಮಿಕ ಸಂಘಟನಾ ಹಕ್ಕುಗಳೂ ಮಾಯವಾಗುತ್ತವೆ.

1980ರಲ್ಲಿ ಮುಷ್ಕರ ಹಾಗೂ ಹೋರಾಟಗಳಲ್ಲಿ ಒಂದು ರೀತಿಯ ಆಲಸಿಕೆ ಕಂಡಿದ್ದು ನಿಜ. ಸ್ವಲ್ಪ ಮಟ್ಟಿಗೆ ಹೊಸ ಆಡಳಿತ ಹುಟ್ಟಿಸಿದ್ದ ಭ್ರಮೆಗಳು ಮತ್ತು 1979ರ ಹೋರಾಟದ ಅನೇಕ ಸವಲತ್ತುಗಳನ್ನು ಅನುಭವಿಸುತ್ತಿದ್ದು ಸ್ವಲ್ಪ ಮಟ್ಟಿಗೆ ಇದಕ್ಕೆ ಕಾರಣವಾಗಿದ್ದವು. 1979ರಲ್ಲಿ ಮುಷ್ಕರ ಮತ್ತು ಬೀಗಮುದ್ರೆಗಳಲ್ಲಿ 43.87 ಮಿಲಿಯನ್ ಕೆಲಸದ ದಿನಗಳು ಹಾಳಾಗಿದ್ದರೆ 1980ರ ಮೊದಲ ಒಂಬತ್ತು ತಿಂಗಳುಗಳಲ್ಲಿ ಕೇವಲ 9.89 ಮಿಲಿಯನ್ ದಿನಗಳಾಗಿದ್ದವು. ಡಿಸೆಂಬರ್ ತಿಂಗಳಿನಲ್ಲಿ ಕಾರ್ಮಿಕ ಮಂತ್ರಿಯು ಪಾರ್ಲಮೆಂಟಿನಲ್ಲಿ ಕೈಗಾರಿಕಾ ಬಾಂಧವ್ಯ ಹಾಗೂ ಹಾಳಾದ ಕೆಲಸದ ದಿನಗಳಲ್ಲಿ ಆಗಿರುವ ಗಮನಾರ್ಹ ಪ್ರಗತಿಯನ್ನು ಒಪ್ಪಿಕೊಂಡರು. ಇದಕ್ಕೆ ಪ್ರತಿಫಲವೆಂಬಂತೆ ಜನವರಿಯಲ್ಲಿ ಲೋಕೋ ಸಿಬ್ಬಂದಿ ವಿರುದ್ಧ ದಬ್ಬಾಳಿಕೆ ಹಾಗೂ ಎಲ್.ಐ.ಸಿ. ಸುಗ್ರೀವಾಜ್ಞೆಯನ್ನು ತರಲಾಯಿತು.

ಕಾರ್ಮಿಕ ಹೆಚ್ಚುವರಿ ಭತ್ತೆಯ ಮೇಲೆ ಮಿತಿ ಮತ್ತು ಇನ್ನಿತರ ನಿರ್ಬಂಧಿತ ಕ್ರಮಗಳನ್ನು ಸರ್ಕಾರ ತರಬೇಕೆಂದಿದೆ. 'ಕೂಲಿ-ಮತ್ತು ಆದಾಯ' ನೀತಿಯ ಹೆಸರಿನಲ್ಲಿ ದುಡಿಯುವ ವರ್ಗವನ್ನು ತನ್ನ ದಿವಾಳಿಖೋರ ಹಾಗೂ ಗುತ್ತೇದಾರಿ ಸಂಸ್ಥೆಗಳ ಪರವಾದ ನೀತಿಗಳಿಗೆ ಬಲಿಪಶು ಮಾಡಬೇಕೆಂದಿರುವ ಸರ್ಕಾರದ ಉದ್ದೇಶ ಸ್ಪಷ್ಟವಾಗಿದೆ. ದೊಡ್ಡ ಹೋರಾಟಗಳು ಇನ್ನೂ ಮುಂದಿವೆ. ಈ ಹೋರಾಟವಲ್ಲಿ ದುಡಿಯುವ ವರ್ಗ ಅಧಿಕಾರಶಾಹಿಯ ಎಲ್ಲ ದಬ್ಬಾಳಿಕೆಯನ್ನು ಅವರ ಪೂರ್ಣ ಸ್ವರೂಪದಲ್ಲಿ ಎದುರಿಸಬೇಕಾಗಿದೆ.

ಗೆಳೆಯರೇ, ಮುಂದಿನ ಐದು ವರ್ಷಗಳಿಗಾಗಿ ಈಗ ಸಿದ್ಧಪಡಿಸಿರುವ ಆರನೇ ಪಂಚವಾರ್ಷಿಕ ಕರಡು ಯೋಜನೆಯು ಸರ್ಕಾರಿ ನೀತಿಯನ್ನು ಬಹಿರಂಗಗೊಳಿಸಿದೆ. ಈ ಭಯಂಕರ ಯೋಜನೆಯು ಅಭಿವೃದ್ಧಿ ಹಾಗೂ ಪ್ರಗತಿಯ ಎಲ್ಲ ಹೊರೆಯನ್ನು ಅಮಾನುಷವಾಗಿ ಶ್ರೀ ಸಾಮಾನ್ಯನ ಮೇಲೆ ಹೇರಿದೆ. ಡೆಲ್ಲಿಯಲ್ಲಿ ನಡೆದ ರೈತ ಸಮ್ಮೇಳನದಲ್ಲಿ ಶ್ರೀಮತಿ ಗಾಂಧಿ, ಸರ್ಕಾರದ ಎಲ್ಲ ಸಹಾಯವನ್ನು ಅವರಿಗೆ ನೀಡುವುದಾಗಿ ಹೇಳಿದ್ದಾರೆ. ಯೋಜನಾ ಆಯೋಗದ ಅಧ್ಯಕ್ಷೆಯಾದ ಶ್ರೀಮತಿಗಾಂಧಿ ಕ್ಷಾಮದ ದವಡೆಯಲ್ಲಿರುವ ರೈತ ಹಾಗೂ ರೈತ ಕಾರ್ಮಿಕರಿಗಾಗಿ ನೀಡಿರುವುದೇನು? ಸಾವಿರ ಪುಟಗಳಿಗೂ ಮಿಕ್ಕಿರುವ ಕರಡು ಯೋಜನೆಯಲ್ಲಿ ಭೂಸುಧಾರಣೆ ಬಗ್ಗೆ ಉಲ್ಲೇಖವೇ ಇಲ್ಲ. ಲಕ್ಷಾಂತರ ಎಕರೆಗಳಷ್ಟಿರುವ ಹೆಚ್ಚುವರಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಹಂಚುವುದಿರಲಿ, ಉಳುವವನಿಗೆ ಭೂಮಿಯ ಆಶ್ವಾಸನೆಯೂ ಇದರಲ್ಲಿಲ್ಲ. ಗ್ರಾಮೀಣ ಪ್ರದೇಶದ ಶೇ. 30ರಷ್ಟು ಭೂಮಿಯು ಕೇವಲ ಶೇ. 6ರಷ್ಟು ರೈತ ಕುಟುಂಬಗಳು

ಹೊಂದಿರುವುದನ್ನು ಮುರಿಯುವಂತಹ ಯಾವುದೇ ಕಾರ್ಯಕ್ರಮವೂ ಇವರಲ್ಲಿಲ್ಲ.

ಇದಲ್ಲದೆ ಈಗ ಆಹಾರ ಪದಾರ್ಥಗಳ ಮಾರಾಟದ ಮೇಲೆ ನೀಡುತ್ತಿರುವ ಸಬ್ಸಿಡಿಯನ್ನು ಹಿಂತೆಗೆದುಕೊಳ್ಳಲು ಯೋಜನೆಯು ಕರೆ ನೀಡಿದೆ. ಇವರಿಂದ ರೈತನಿಗೆ ಯಾವ ರೀತಿಯ ಪ್ರಯೋಜನವಿಲ್ಲದಿದ್ದರೂ ಆಹಾರ ಪದಾರ್ಥಗಳ ಬೆಲೆ ಹೆಚ್ಚುವುದು ಮಾತ್ರ ನಿಜ. ಈ ಕ್ರಮದಿಂದ ರೈತನಿಗೆ ಆಹಾರ ಬೆಳೆಯ ಮೇಲೆ ಸಿಗುವ ಬೆಲೆ ಇನ್ನೂ ಕಡಿತವಾಗುತ್ತಿದೆ. ಅವನ ಮಾರಾಟದ ಬೆಲೆಯನ್ನು ಕಡಿಮೆ ಮಾಡಲು ಎಲ್ಲ ಪ್ರಯತ್ನ ಮಾಡಲಾಗುತ್ತಿದೆ.

ಪಂಚವಾರ್ಷಿಕ ಯೋಜನೆಗಳು ಆಹಾರ ಪದಾರ್ಥಗಳ ಮೇಲೆ ಹೆಚ್ಚುವರಿ ಬೆಲೆಯನ್ನು ಗ್ರಾಹಕನಿಗೆ ವಿಧಿಸಿದ್ದರೂ ಜೊತೆಯಲ್ಲೇ ಬೆಳೆಯುವವನಿಗೆ ಮಾರಾಟ ಬೆಲೆಯಲ್ಲಿ ವಂಚನೆ ಮಾಡುತ್ತಿವೆ.

ನಗರಗಳಲ್ಲಿ ಜೀವನ ವೆಚ್ಚವನ್ನು ನಿಯಂತ್ರಿಸುವುದಕ್ಕಾಗಿ ಮತ್ತು ಅದಕ್ಕಾಗಿ ಹೆಚ್ಚುವರಿ ಭತ್ಯೆಗಳನ್ನು ಬಂಡವಾಳಶಾಹಿಗಳು, ಕಾರ್ಮಿಕರಿಗೆ ನೀಡದಂತೆ ಮತ್ತು ಅವರ ಲಾಭವನ್ನು ಹೆಚ್ಚು ಮಾಡಲು ಕಳೆದ ಮೂರು ದಶಕಗಳಲ್ಲಿ ಗ್ರಾಮೀಣ ಜನರು ಹೇಗೆ ವಂಚನೆಗೊಳಗಾಗಿದ್ದಾರೆ ಎಂಬುದನ್ನು ಸಂಘಟಿತ ಕಾರ್ಮಿಕರು ಅರ್ಥಮಾಡಿಕೊಳ್ಳಬೇಕಾಗಿದೆ.

ನಗರಗಳಲ್ಲಿ ಆಹಾರ ಪದಾರ್ಥಗಳ ಬೆಲೆಗಳನ್ನು ನಿಗದಿಪಡಿಸಿದ ಮಟ್ಟದೊಳಗೆ ನಿಯಂತ್ರಿಸಲು ಸ್ವಲ್ಪ ಮಟ್ಟಿಗೆ ಸಬ್ಸಿಡಿ ನೀಡಲಾಗುತ್ತಿದೆ. ಅದಕ್ಕೂ ಹೆಚ್ಚಾಗಿ ಸಣ್ಣ ಪ್ರಮಾಣದ ರೈತರು ಅತ್ಯಂತ ಕೆಳಮಟ್ಟದಲ್ಲಿ ತಮ್ಮ ಬೆಳೆಗಳನ್ನು ಮಾರುವಂತೆ ಬಲಾತ್ಕರಿಸಲಾಗುತ್ತಿದೆ. ಸರಕಾರದ ಇಡೀ ಧಾನ್ಯ ಶೇಖರಣೆಯ ನೀತಿ ಬಡರೈತರು ನಿಗದಿಪಡಿಸಿದ ಬೆಲೆಗಳಿಗಿಂತಲೂ ಕಡಿಮೆ ದರದಲ್ಲಿ ತಮ್ಮ ಬೆಳೆಯನ್ನು ಮಾರಾಟಮಾಡುವಂತೆ ನೋಡಿಕೊಳ್ಳುವುದೇ ಆಗಿದೆ. ಅವನನ್ನು ವಂಚಿಸುತ್ತಿರುವುದು ದುಡಿಯುವ ವರ್ಗದ ಹಿತವೃಷ್ಟಿಯಿಂದಲ್ಲ;ಬಂಡವಾಳಗಾರರ ಲಾಭವನ್ನು ಹೆಚ್ಚಿಸಲು.

ರೈತನ ಈ ಬರ್ಬರ ಶೋಷಣೆಯನ್ನು ದುಡಿಯುವ ವರ್ಗ ಧಿಕ್ಕರಿಸುವದಷ್ಟೇ ಅಲ್ಲದೆ ಅವನ ಬೆಳೆಗಳಿಗೆ ಸರಿಯಾದ ಬೆಲೆಗಳು ಸಿಗುವಂತೆ ಕೇಳಬೇಕಾಗಿದೆ. ಭೂಮಾಲಿಕರ, ಬಂಡವಾಳಗಾರರ ಲೆಕ್ಕದಲ್ಲಿ ಅವನಿಗೆ ಸಿಗುವ ಸಬ್ಸಿಡಿಯನ್ನು ಹೆಚ್ಚಿಸಬೇಕಾಗಿದೆ.

ರೈತನ ಬೆಳೆಗೆ ಹೆಚ್ಚು ಬೆಲೆ ಕೊಟ್ಟರೆ ನಗರಗಳಲ್ಲಿ ಆಹಾರ ಪದಾರ್ಥಗಳ ಬೆಲೆ ಹೆಚ್ಚುತ್ತದೆಂದೂ ಬಂಡವಾಳಗಾರರ ಏಜಂಟ್‌ರಂಗಳು ದುಡಿಯುವ ವರ್ಗ ಹಾಗೂ ನಗರ ವಾಸಿಗಳನ್ನು ಬೆದರಿಸುತ್ತಿದ್ದಾರೆ. ಮೇಲೆ ಹೇಳಿದಂತೆ ಬೆಳೆಗೆ ಸರಿಯಾದ ಬೆಲೆ ನಿಗದಿ ಮಾಡುವದು ಮತ್ತು ಸಬ್ಸಿಡಿ ನೀಡುವುದರಿಂದ ಈ ಅಪಾಯವಿರುವುದಿಲ್ಲ.

ಹೆಚ್ಚುವರಿ ಕೂಲಿ ಅಥವಾ ಭತ್ಯೆ ಕೇಳಿದಾಗಲೆಲ್ಲಾ ಇದೇ ವಾದವನ್ನು ಮುಂದಿಡುತ್ತಾರೆಂದು ಕಾರ್ಮಿಕರಿಗೆ ಗೊತ್ತು. ಕೂಲಿ ಹೆಚ್ಚಳದಿಂದ ರೈತ ಹಾಗು ಗ್ರಾಹಕರಿಗೆ ತೊಂದರೆಯಾಗುತ್ತದೆ ಎಂದು ಬೊಬ್ಬೆ ಹಾಕುತ್ತಾರೆ. ಇದು ಪುನಃ ತಮ್ಮ ಲಾಭವನ್ನು ಕಡಿಮೆ ಮಾಡಿಕೊಳ್ಳಲು ಇಚ್ಛಿಸುವ ಬಂಡವಾಳಗಾರರ ವಾದ. ಕಾರ್ಮಿಕರಿಗೆ ನೀಡುವ ಹೆಚ್ಚುವರಿ ವೇತನದಿಂದಾಗಿ ರೈತ ಮತ್ತು ಗ್ರಾಹಕನಿಗೆ ದಂಡವಿಧಿಸುತ್ತಾರೆ. ಬಂಡವಾಳಗಾರರ ಇನ್ನೂ ಕೆಲವು ಏಜಂಟರಿದ್ದಾರೆ. ಅವರವಾದವೆಂದರೆ ಬೆಳೆಗಳಿಗೆ ಹೆಚ್ಚುವರಿ ಬೆಲೆ ನೀಡುವದರಿಂದ ಕೇವಲ ಭೂಮಾಲೀಕರು ಹಾಗೂ ಶ್ರೀಮಂತ ರೈತರಿಗೆ ಸಹಾಯವಾಗುತ್ತದೆಂದು ಸಣ್ಣ ಪ್ರಮಾಣದ ರೈತರ ಸಮೂಹ ಅಸ್ತಿತ್ವದಲ್ಲೇ ಇಲ್ಲ ಎಂಬ ಅಭಿಪ್ರಾಯ ಮೂಡಿಸಲು ಯತ್ನಿಸುತ್ತಾರೆ. ಬಂಡವಾಳಗಾರರ ಈ ಎಲ್ಲ ಮುಖವಾಣಿಗಳನ್ನು ಅವರ ಎಲ್ಲ ವಾದಗಳೊಂದಿಗೆ ಕಾರ್ಮಿಕ ವರ್ಗವು ತಿರಸ್ಕರಿಸುವದಷ್ಟೇ ಅಲ್ಲದೇ ರೈತಾಪಿವರ್ಗದ ಬಗ್ಗೆ ಯೋಜನಾಮಂಡಳಿಯವರ ಧೋರಣೆಯನ್ನು ತೀವ್ರವಾಗಿ ಪ್ರತಿಭಟಿಸುತ್ತದೆ.

ಕೃಷಿಕಾರ್ಮಿಕ ಬಗ್ಗೆ ಯೋಜನಾಕಾರರು ಕನಿಷ್ಠವೇತನ ಜಾರಿಗೆ ತಂದಿರುವದು ಮತ್ತು ಮನೆ ಕಟ್ಟಿಕೊಳ್ಳಲು ನೀಡುವ ಅಲ್ಪ ಸಹಾಯ ಇವುಗಳ ಮೂಲಕ ತಮ್ಮ ಅಂತಃ ಸಾಕ್ಷಿಯನ್ನು ಸಮರ್ಥಿಸಿಕೊಳ್ಳಲು ಯತ್ನಿಸುತ್ತಾರೆ. ಆದರೆ ಇಡೀ ಕೃಷಿಕಾರ್ಮಿಕ ಸಮೂಹಕ್ಕಾಗಿ ಯೋಜನೆ ಏನನ್ನು ನೀಡುತ್ತದೆ? ಕೊನೆಯ ಪಕ್ಷ ಏರುತ್ತಿರುವ ಬೆಲೆಗಳಿಂದ ರಕ್ಷಣೆ ನೀಡುತ್ತದೆಯೇ? ಯೋಜನೆಯು 21302 ಕೋಟಿ ರೂಗಳ ಸಂಪನ್ಮೂಲಗಳ ಸಂಗ್ರಹಕ್ಕೆ ಕರೆ ನೀಡಿದೆ. ಐದು ಸಾವಿರ ಕೋಟಿ ರೂಗಳ ಖೋತಾ ಬಜೆಟ್ ತೋರಿಸಿದೆ. ಈ ಖೋತಾ ಬಜೆಟ್ ಇದರ ಮೂರು-ಪಟ್ಟಿಗಿಂತ ಹೆಚ್ಚಾಗದಿದ್ದರೆ ಜನಗಳು ತಮ್ಮನ್ನು ತಾವೇ ಅಭಿನಂದಿಸಿಕೊಳ್ಳಬೇಕಾಗಿದೆ. ಇದರ ಅರ್ಥ ಹಣದುಬ್ಬರ ಅಧಿಕವಾಗುತ್ತಲೇ ಹೋಗುತ್ತದೆ. ಮತ್ತು ಹೆಚ್ಚುವರಿ ಬೆಲೆಗಳು ಜನರನ್ನು ದೋಚುತ್ತವೆ.

ಇದು ಇಷ್ಟೇ ಅಲ್ಲ. ಜನಗಳ ಮೇಲೆ ಇನ್ನೂ ಸುಲಿಗೆಯ ಹೊರೆಯನ್ನು ಹೇರಿ 21,000ಕೋಟಿರೂಗಳ ಸಂಪನ್ಮೂಲಗಳನ್ನು ಶೇಖರಿಸಬೇಕಾಗಿದೆ.

ಈ ಬಂಡವಾಳ - ಭೂಮಾಲಕ ಸರ್ಕಾರ ಮತ್ತು ಅವರ ಯೋಜನಾ ಮಂಡಳಿ, ದೇಶದ ಗುತ್ತೇದಾರಿ ಸಂಸ್ಥೆಗಳು ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳನ್ನು ಹತೋಟಿಯಲ್ಲಿಡಲು ಇಚ್ಛಿಸುವದಿಲ್ಲ. ಬದಲಾಗಿ ಅಭಿವೃದ್ಧಿಯ ಹೆಸರಿನಲ್ಲಿ ಅನೇಕ ಸವಲತ್ತುಗಳನ್ನು ಅವರಿಗೆ ನೀಡುತ್ತಾರೆ. ಕಪ್ಪು ಹಣದ ಖದೀಮರಿಗೆ ಇತ್ತೀಚೆಗೆ ತೋರಿರುವ ರಿಯಾಯಿತಿ ಎಂದರೆ ಬೇರರ್‌ಬಾಂಡ್ (Bearer Bond) ಯೋಜನೆ

ಕೃಷಿ ವಿಭಾಗದ ಶ್ರೀಮಂತ ವಿಭಾಗಗಳ ಹೆಚ್ಚುವರಿ ಆದಾಯವನ್ನು ಪಡೆಯಬಹುದಾದ ಸಾಧ್ಯತೆಗಳನ್ನು ಒಪ್ಪಿಕೊಂಡರೂ, ತೆರಿಗೆ ಮತ್ತು ಅದರಲ್ಲೂ ವಿಶೇಷವಾಗಿ ಬಂಡವಾಳ ಭೂಮಾಲಕರನ್ನು ತಟ್ಟುವ ನೇರ ತೆರಿಗೆ ಹೆಚ್ಚು ವ್ಯಾಪ್ತಿ ಇಲ್ಲದಂತೆ ಯೋಜನಾಕಾರರು ವಾದ ಮಾಡುತ್ತಾರೆ. ಆದಾಗ್ಯೂ ಐದು ಸಾವಿರ ಕೋಟಿರೂಗಳಿಗೂ ಮಿಕ್ಕಿ ಹಣವನ್ನು ತೆರಿಗೆ ಮೂಲಕ ಸಂಗ್ರಹಿಸಲಾಗುತ್ತದೆ. ಇದರಲ್ಲಿ ಹೆಚ್ಚು ಭಾಗ ಪರೋಕ್ಷ (ಅಪ್ರತ್ಯಕ್ಷ) ತೆರಿಗೆಯಿಂದಾಗಿದ್ದು ಸಾಮಾನ್ಯನ ಮೇಲೆ ಈ ಹೊರೆ ಬೀಳುತ್ತದೆ.

3200 ಕೋಟಿ ರೂಗಳನ್ನು ಆಹಾರ ಪಧಾರ್ಥಗಳ ಮೇಲೆ ನೀಡುವ ಸಬ್ಸಿಡಿಯನ್ನು ಒಳಗೊಂಡಂತೆ ಇತರ ಸಬ್ಸಿಡಿಗಳನ್ನು ಕಡಿಮೆಗೊಳಿಸುವವರ ಮೂಲಕ ಸಂಗ್ರಹಿಸಲಾಗುತ್ತದೆ. ಪುನಃ ಈ ಹೊರೆಯು ಹೆಚ್ಚಾದ ಆಹಾರ ಪದಾರ್ಥಗಳ ಮೇಲೆ ಬೆಲೆಯ ರೂಪದಲ್ಲಿ ಸಾಮಾನ್ಯನ ಮೇಲೆ ಬೀಳುತ್ತದೆ.

ಸರ್ಕಾರಿ ಸ್ವಾಮ್ಯದ "ಸೇವೆ"ಗಳ ಬೆಲೆ ಹೆಚ್ಚಿಸುವದರ ಮೂಲಕ ಸಂಪನ್ಮೂಲಗಳನ್ನು ಕ್ರೋಢೀಕರಿಸಲಾಗುತ್ತದೆ. ಸಾಗಾಣಿಕೆ ಹಾಗೂ ಪ್ರಮಾಣ ದರಗಳ ಮೇಲೆ ಕಳೆದ ವರ್ಷ ವಿಧಿಸಲಾದ ಶೇ. 15-20ರಷ್ಟು ಸರ್ಚಾರ್ಜಲ್ಲದೇ 81ರ ರೈಲ್ವೆ ಬಜೆಟ್ ಈಗಾಗಲೇ 320 ಕೋಟಿರೂಗಳಷ್ಟು ಸರಚಾರ್ಜ ವಿಧಿಸಿದೆ. ಜನಗಳು ದಂಗಾಗಿ ಇದನ್ನು ಪ್ರತಿಭಟಿಸುತ್ತಿದ್ದಾರೆ. ಆದರೆ ಇದು ಕೇವಲ ಪ್ರಾರಂಭಮಾತ್ರ. ಯೋಜನೆಗೆ 1200ಕೋಟಿ ರೂಗಳನ್ನು ನೀಡಲು ರೇಲ್ವೆ ಇಲಾಖೆಯನ್ನು ಕೇಳಲಾಗಿದೆ. ಸಧ್ಯದ ಕ್ರಮಗಳು ಈ ಮೊತ್ತವನ್ನು ನೀಡುವಲ್ಲಿ ವಿಫಲವಾದಲ್ಲಿ ಪುನಃ ಹೆಚ್ಚುವರಿ ದರಗಳನ್ನು ಹೇರಬೇಕಾಗುತ್ತದೆ. ವಾಸ್ತವವಾಗಿ ರೇಲ್ವೆ ಇಲಾಖೆ ಆದಾಯದ ತನ್ನ ಎಲ್ಲ ಮಿತಿಗಳನ್ನು ಮೀರುತ್ತಿದೆ. ಅಂಚೆ ಮತ್ತು ತಂತಿ ಇಲಾಖೆಯವರನ್ನು ಯೋಜನೆಗಾಗಿ 200 ಕೋಟಿ ರೂ. ಸಂಗ್ರಹಿಸಲು ಕೇಳಲಾಗಿದೆ.

ಸಾರ್ವಜನಿಕ ಕ್ಷೇತ್ರದ ಉದ್ಯಮಗಳು ಈಗಾಗಲೇ ಮಿತಿಮೀರಿದ ನಷ್ಟ ಅನುಭವಿಸುತ್ತಿದ್ದರೂ ದಕ್ಷ ಆಡಳಿತ ಹಾಗೂ ಸರಿಯಾದ ಬೆಲೆಗಳ ಮೂಲಕ ಯೋಜನೆಗೆ 1000 ಕೋಟಿ ರೂಗಳ ಕಾಣಿಕೆಯನ್ನು ನಿರೀಕ್ಷಿಸಲಾಗಿದೆ. ಈ ಉದ್ಯಮಗಳ ತಮ್ಮ ಉತ್ಪಾದನಾ ದಕ್ಷತೆಯನ್ನು ಹೆಚ್ಚಿಸಿಕೊಳ್ಳುವದರ ಮೂಲಕ ಗಮನಾರ್ಹ ಕಾಣಿಕೆ ನೀಡಬಹುದೆಂಬುದರಲ್ಲಿ ಸಂದೇಹವಿಲ್ಲ. ಆದರೆ ಇದು ಈಗಿನ ಕಾರ್ಮಿಕ ವಿರೋಧಿ ಹಾಗೂ ನೀತಿಗೆಟ್ಟ ಅಧಿಕಾರದಾಹದ ಆಡಳಿತವರ್ಗದಿಂದ ಸಾಧ್ಯವಿಲ್ಲ. ಈ ಆಡಳಿತವರ್ಗಗಳು ಕಾರ್ಮಿಕರೊಂದಿಗೆ ಆದ ಒಪ್ಪಂದಗಳನ್ನೇ ತಿರಸ್ಕರಿಸುವುದಲ್ಲದೇ ಕಾರ್ಮಿಕ ಸಂಘಗಳ ಬಗೆಗೆ ಹೊಂದಿರುವ ವಿರೋಧಿ ನೀತಿಯಿಂದಾಗಿ ಉತ್ಪಾದನೆಯನ್ನೇ ಹೇಗೆ ಸ್ಥಗಿತಗೊಳಿಸುತ್ತವೆ ಎಂಬುದಕ್ಕೆ ಬೆಂಗಳೂರಿನ ಮುಷ್ಕರವೇ ಉದಾರಣೆ. ಸಾರ್ವಜನಿಕ ಕ್ಷೇತ್ರದಲ್ಲಿ 1980ರ ಮೊದಲ 9 ತಿಂಗಳಲ್ಲಿ ಹಾಳಾದ ಕೆಲಸದ ದಿನಗಳು 1.2 ಮಿಲಿಯನ್ ದಿನಗಳಾಗಿದ್ದರೆ 79ರಲ್ಲಿ 7.66 ಮಿಲಿಯನ್ ದಿನಗಳಾಗಿದ್ದವು. ಈಗಿನ ಕಾರ್ಮಿಕ ವಿರೋಧಿ ನೀತಿಯನ್ನು ತೊರೆದಲ್ಲಿ ಮತ್ತು ಉದ್ಯಮವನ್ನು ನಡೆಸುವಲ್ಲಿ ಕಾರ್ಮಿಕನ ಸಹಭಾಗಿತ್ವವನ್ನು ಸಮಾನತೆಯ ಆಧಾರದ ಮೇಲೆ ನೋಡಿಕೊಂಡಲ್ಲಿ ಮಾತ್ರ ಸಾರ್ವಜನಿಕ ಕ್ಷೇತ್ರವು ತನ್ನ ಉತ್ಪಾದನೆಯನ್ನು ಅಧಿಕಗೊಳಿಸಬಹುದು. ಉದ್ಯಮದಲ್ಲಿ ಕಾರ್ಮಿಕರ ಸಹಭಾಗಿತ್ವ ಸಮಾನತೆಯನ್ನು ಆಧಾರಿಸಿದ್ದು ಎಲ್ಲ ಹಣಕಾಸು, ಕಚ್ಚಾವಸ್ತು ಮತ್ತು ವಾಣಿಜ್ಯ ವ್ಯವಹಾರದಲ್ಲಿ ಕಾರ್ಮಿಕ ಪ್ರತಿನಿಧಿಗೆ ಅವಕಾಶವಿದ್ದರೆ ತನ್ನ ಕಾರ್ಮಿಕ ಸಂಘಗಳು ಮತ್ತು ಇಡೀ ಕಾರ್ಮಿಕವರ್ಗ ಸಾರ್ವಜನಿಕ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿನ ಉದ್ಯಮಗಳ ದಕ್ಷ ಉತ್ಪಾದನೆಯ ನೆರವಿಗೆ ಸಿದ್ಧವಿವೆ ಎಂಬುದನ್ನು ಸಿ.ಐ.ಟಿ.ಯು. ಪುನಃ ಸ್ಪಷ್ಟಪಡಿಸುತ್ತದೆ.

ಆದರೆ ಸರ್ಕಾರ ಅಥವಾ ಮಾಲೀಕರಿಂದ ಇದಕ್ಕೆ ಯಾವುದೇ ಪ್ರತಿಕ್ರಿಯೆ ಇಲ್ಲ, ತುರ್ತುಪರಿಸ್ಥಿತಿಯ ಪ್ರಖರತೆಯನ್ನು ಮರೆಮಾಚಲು ಕೈಗಾರಿಕೆಗಳಲ್ಲಿ ಕಾರ್ಮಿಕರ ಸಹಭಾಗಿತ್ವವನ್ನು 20 ಅಂಶದ ಕಾರ್ಯಕ್ರಮಗಳಲ್ಲಿ ಸೇರಿಸಿದ್ದು ಒಂದು ಕಣ್ಣೊರೆಸುವ ತಂತ್ರ ಎಂಬುದು ಸ್ಪಷ್ಟವಾಗಿದೆ. ಕಳೆದ 6-7 ವರ್ಷಗಳಲ್ಲಿ ಯಾವುದೇ ಸಾರ್ವಜನಿಕ ಕ್ಷೇತ್ರ ಅಥವಾ ರೈಲ್ವೆಯಂಥ ಇಲಾಖೆಗಳು ಈ ಸರ್ಕಾರಿ ಹೇಳಿಕೆಗಳ ಬಗ್ಗೆ ಯಾವುದೇ ಎಚ್ಚರವನ್ನು ತೋರಿಲ್ಲ. ಈ ಸ್ಥಿತಿಯಲ್ಲಿ ಅವಕ್ಷ ಸಾರ್ವಜನಿಕ ಕ್ಷೇತ್ರದ ಕಾಣಿಕೆಯಾದ 1000 ಕೋಟಿಗಳನ್ನು "ಸರಿಯಾದ ಬೆಲೆಗಳ ನಿಗದಿ"ಯ ಮೂಲಕ ವಸ್ತುಗಳ ಬೆಲೆಗಳನ್ನು ಏರಿಸಿಭರಿಸಲಾಗುತ್ತಿದೆ.

ಇದೇ ಸಮಯದಲ್ಲಿ "ಕೋಲ್ ಇಂಡಿಯಾ" ಸಂಸ್ಥೆ ತನ್ನ ಐದನೂರ ಕೋಟಿ ರೂ.ಗಳ ನಷ್ಟವನ್ನು ತೊಡೆದು ಹಾಕಬೇಕಾಗಿದೆ. ಪ್ರತಿ ಟನ್ನಿಗೆ 20 ರೂ.ಗಳಂತೆ ಬೆಲೆ ಏರಿಸುವುದರ ಮೂಲಕ ಈ ನಷ್ಟವನ್ನು ಪರಿಹರಿಸಲು ಯೋಜಿಸಲಾಗಿದೆ. ರಾಜ್ಯ ಸರ್ಕಾರಗಳನ್ನು ತಮ್ಮ ಪಾಲಿನ ಯೋಜನೆಯ ಹೆಚ್ಚುವರಿ ಸಂಪನ್ಮೂಲಗಳನ್ನು ಅಧಿಕಗೊಳಿಸಲು ಕೇಳಲಾಗಿದೆ. ಈ ರಾಜ್ಯಗಳು ಐದು ವರ್ಷಗಳಲ್ಲಾಗಿರುವ 3500 ಕೋಟಿ ರೂ.ಗಳ ನಷ್ಟವನ್ನು ಭರಿಸಲು ವಿದ್ಯುಚ್ಛಕ್ತಿ ಬೆಲೆಯನ್ನು ಏರಿಸಬೇಕಾಗಿದೆ. ರಾಜ್ಯಸಾರಿಗೆ ಉದ್ಯಮಗಳು ಬಸ್ ದರ ಹೆಚ್ಚಿಸುವುದರ ಮೂಲಕ 1378 ಕೋಟಿ ರೂ. ಹೆಚ್ಚುವರಿ ಸಂಪನ್ಮೂಲಗಳನ್ನು ಸಂಗ್ರಹಿಸಬೇಕಾಗಿದೆ. ಹಲವು ರಾಜ್ಯಗಳಲ್ಲಿ ಈಗಾಗಲೇ ಉದ್ರಿಕ್ತ ಜನರಿಂದಾಗಿ ಬಸ್ಸುಗಳಿಗೆ ಬೆಂಕಿ, ಗೋಲೀಬಾರ್ ಮುಂತಾದವುಗಳ ನಡುವೆ ಏರಿಸಿರುವ ಪ್ರಯಾಣ ದರಗಳು, ದರಗಳು 825 ಕೋಟಿ ರೂ. ತರುವ ನಿರೀಕ್ಷೆ ಇದೆ. ಇನ್ನಿತರ ರಾಜ್ಯಗಳು, ತಮ್ಮ ಪಾಲಿನ ಇನ್ನೂ 1300 ಕೋಟಿ ರೂ.ಗಳನ್ನು ಭರಿಸಲು ಜನರ ಕೊಲೆ, ಗೋಲೀಬಾರ್, ಬೆಂಕಿಗಳೊಡನೆ ಮೇಲಿನ ರಾಜ್ಯಗಳನ್ನು ಅನುಸರಿಸಬೇಕಾಗಿದೆ. ಹೆಚ್ಚಿಸಿರುವ ನೀರಾವರಿ ಲೆವಿ 325 ಕೋಟಿ ರೂ. ತರಬಹುದು.

ಬ್ಲಾಕ್ ಮಟ್ಟದ ಸಮಿತಿಗಳು ಮತ್ತು ಪಂಚಾಯಂತಿಗಳು ತಮ್ಮ ನಿಗದಿಪಡಿಸಿರುವ ಸಂಪನ್ಮೂಲಗಳನ್ನು ಲಗಳನ್ನು ಎತ್ತಬೇಕಾಗಿದೆ. ಕೊನೆಗೆ ಸ್ಥಳೀಯ ಆಡಳಿತಗಳು ಸಂಪನ್ಮೂಲಗಳನ್ನು ಸಂಗ್ರಹಿಸಲು ಅನುಕೂಲವಾಗುವಂತೆ ಮನೆ ಬಾಡಿಗೆ ನಿಯಂತ್ರಣ ಕಾಯಿದೆಯನ್ನು ಹಿಂತೆಗೆದುಕೊಳ್ಳಲು ಸಲಹೆ ಬಂದಿದೆ.

ಇದು ಯೋಜನೆಗೆ ಸಾಮಾನ್ಯ ಜನರಿಂದ ಸಂಪನ್ಮೂಲಗಳನ್ನು ಸಂಗ್ರಹಿಸಲು ಹರಡಿರುವ ಜಾಲ. ವಸ್ತುಗಳ ಮೇಲೆ ವಿಧಿಸುವ ತೆರಿಗೆಯಲ್ಲದೇ ಆಧುನಿಕ ಜೀವನಕ್ಕೆ ಅವಶ್ಯವಾದ ಸಾರಿಗೆ, ವಿದ್ಯುಚ್ಛಕ್ತಿ, ನೀರು, ಅಂಚೆ, ರೈಲು ಮುಂತಾದವುಗಳೆಲ್ಲವೂ ಸಾಮಾನ್ಯನ ಕೈಗೆಟಕದಂತೆ ದುಬಾರಿಯಾಗುತ್ತಿವೆ. ಆದರೆ ದೊಡ್ಡ ಬಂಡವಾಳ-ಜಮೀನ್ದಾರರ ಆದಾಯವನ್ನು ಮಾತ್ರ ನೇರ ತೆರಿಗೆಯಡಿಯಲ್ಲಿ ರಕ್ಷಿಸಲಾಗುತ್ತಿದೆ. ಯೋಜನಾಮಂಡಳಿಯು ಹೇಳುವಂತೆ "ಆದಾಯ ತೆರಿಗೆ, ಕಾರ್ಪೋರೇಷನ್ ತೆರಿಗೆ, ಸಂಪತ್ತಿನ ತೆರಿಗೆಗಳ ಮೂಲಕ ಹೆಚ್ಚುವರಿ ಸಂಪನ್ಮೂಲಗಳ ಸಂಗ್ರಹಣೆಯ ಸಾಧ್ಯತೆಗಳು ತೀರಾ ಸೀಮಿತವಾಗಿವೆ.

ಕೃಷಿಯ ಮೇಲಿನ ನೇರ ತೆರಿಗೆಯು ಕೃಷಿಯ ಆದಾಯದ ಶೇ. 1ಕ್ಕಿಂತಲೂ ಕಡಿಮೆಯಿದೆಯೆಂದು ಯೋಜನಾ ಅಧಿಕಾರಿಗಳು ಅಭಿಪ್ರಾಯಪಡುತ್ತಾರೆ. ದೊಡ್ಡ ಭೂಮಾಲಕರು ಇನ್ನೂ ಅಧಿಕ ತೆರಿಗೆಯನ್ನು ಹೊರಬಲ್ಲರು ಎಂಬುದನ್ನು ಇವರು ಗುರುತಿಸುವುದಿಲ್ಲ. ಅವರನ್ನು ಘಾಸಿಪಡಿಸಲು ಇಷ್ಟಪಡದೆ ಒಟ್ಟು "ಕೃಷಿಕ್ಷೇತ್ರ"ದ ಮಟ್ಟಿಗೆ ಮಾತನಾಡುತ್ತಾರೆ. ಏರು ಮುಖ ತೆರಿಗೆಯ ನೀತಿಯನ್ನು ಅವರು ಸೂಚಿಸುತ್ತಾರಾದರೂ ದೊಡ್ಡ ಭೂಮಾಲಿಕರನ್ನು ಗುರುತಿಸಲು ವಿಫಲರಾಗಿದ್ದಾರೆ.

ಯೋಜನೆಗೆ ಸಂಪನ್ಮೂಲಗಳ ಸಂಗ್ರಹಣೆಯ ಈ ಮಾರ್ಗಗಳು ನಿಚ್ಚಳವಾಗಿ ಬಂಡವಾಳಗಾರ-ಭೂಮಾಲಕ ವರ್ಗ ಪರವಾದ ನಿಲುವನ್ನು ಎತ್ತಿ ತೋರಿಸುತ್ತದೆ.

ಆರ್ಥಿಕ ಅಪಮಾನತೆ ಹಾಗೂ ಬಡತನ ನಿವಾರಣೆಯ ಬಗ್ಗೆ ಯೋಜನಾವ್ಯವಸ್ಥಾಪಕರು ಬೊಬ್ಬೆ ಹೊಡೆಯುತ್ತಿದ್ದಾರೆ. ಬಡತನ ರೇಖೆಗಿಂತ

[6ನೇ ಪುಟ ನೋಡಿ]

# ಮಹಿಳೆಯನ್ನು ಕುರಿತು

ಆರ್. ಪೂರ್ಣಿಮ

**[ಇಂದು (೮-೩-೮೧) ಮದ್ರಾಸ್‌ನಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನ ಪ್ರಾರಂಭವಾಗಲಿದೆ. ಈ ನಿಮಿತ್ತ ವಿಶೇಷ ಲೇಖನ ಪ್ರಕಟಿಸಿದ್ದೇವೆ.]**

ಮಾನವ ಜನಾಂಗದ ಪ್ರಾರಂಭದ ದಿನಗಳಲ್ಲಿ ಒಟ್ಟಿಗೆ ಬದುಕುವ ಕಲ್ಪನೆಯೇ ಇರಲಿಲ್ಲವಾದ್ದರಿಂದ ಹೆಣ್ಣಿನ ಬಗ್ಗೆ ಪ್ರತ್ಯೇಕ ಭಾವನೆಗಳೇ ಇರಲಿಲ್ಲ. ಆಹಾರಹುಡುಕುವಿಕೆ, ಸ್ವರಕ್ಷಣೆ ಎರಡೇ ಮುಖ್ಯವಾಗಿದ್ದಾಗ ಮನುಷ್ಯರ ನಡುವೆ ಭಾವನಾತ್ಮಕ ಸಂಬಂಧಗಳೇ ಅಸ್ಪಷ್ಟವಾಗಿದ್ದವು. ಮುಂದೆ ಮಾನವ ಜನಾಂಗದ ಚರಿತ್ರೆ ವಿವಿಧ ಘಟ್ಟಗಳನ್ನು ಹಾದು ಬರುವಾಗ ಆ ಘಟ್ಟಗಳ ವಿಶಿಷ್ಟ ಲಕ್ಷಣಗಳಿಗೆ, ನಿಯಾಮಕ ಶಕ್ತಿಗಳಿಗೆ ಅನುಗುಣವಾಗಿ ವ್ಯಕ್ತಿಸಂಬಂಧಗಳೂ ಬದಲಾದವು. ಹೆಣ್ಣಿನ ಸ್ಥಾನಮಾನವನ್ನು ಕುರಿತು ಚಾರಿತ್ರಿಕವಾಗಿ ಚರ್ಚಿಸುವಾಗ ಈ ಅಂಶವನ್ನೇ ಆಧಾರವಾಗಿಟ್ಟುಕೊಳ್ಳಬೇಕು. ಏಕೆಂದರೆ, ಸಮಾಜವು ವಿವಿಧ ಘಟ್ಟಗಳಲ್ಲಿ ಬದಲಾಗುವಾಗ, ವ್ಯವಸ್ಥೆಯ ಸಕಲ ಲಕ್ಷಣಗಳನ್ನೂ ಮೈಗೂಡಿಸಿಕೊಂಡಿರುವ ಕುಟುಂಬವೇ ಬದಲಾವಣೆಗೆ ಬಿಂದುವಾಗುತ್ತದೆ. ಕುಟುಂಬದಲ್ಲಿ ಹೆಣ್ಣು ಒಂದು ಅಂಗವಾಗಿರುವುದರಿಂದ, ಅವಳನ್ನು ಕುರಿತ ಚರ್ಚೆಯು ಕುಟುಂಬ, ಸಮಾಜ, ಇವುಗಳ ಹಿನ್ನೆಲೆಯಲ್ಲಿ ನಡೆಯುವುದು ಹೆಚ್ಚು ವೈಜ್ಞಾನಿಕವೂ ಅರ್ಥಪೂರ್ಣವೂ ಆಗುತ್ತದೆ. ಸಮಾಜದ ಗತಿಸ್ಥಿತಿಗಳ ಬದಲಾವಣೆಗಳನ್ನು ಹೆಣ್ಣಿನ ಗತಿಸ್ಥಿತಿಗಳ ಬದಲಾವಣೆಗಳು ಪ್ರತಿಬಿಂಬಿಸುತ್ತವೆ ಎಂಬುದನ್ನು ಅನೇಕ ಪ್ರಗತಿಶೀಲ ಆಲೋಚನಕಾರರು ಒಪ್ಪಿಕೊಂಡಿದ್ದಾರೆ. ಮೊದಲು ಶ್ರಮ ವಿಭಜನೆ, ಶೋಷಣೆ, ದಬ್ಬಾಳಿಕೆ, ವರ್ಗಕಲಹ ನಡೆದಿರುವುದು ಗಂಡು ಹೆಣ್ಣುಗಳ ನಡುವೆಯೇ. ಮನುಷ್ಯ ಇನ್ನೊಬ್ಬ ಮನುಷ್ಯನ ಮೇಲೆ ದಬ್ಬಾಳಿಕೆ, ಶೋಷಣೆ ನಡೆಸುವುದಕ್ಕೆ ಪ್ರೇರಕವಾದ ಅಂಶಗಳು, ಅವಕಾಶಗಳೇ ಗಂಡು ಹೆಣ್ಣಿನಮೇಲೆ ಹಿಡಿತ ಸ್ಥಾಪಿಸುವುದಕ್ಕೂ ಮೂಲ ಕಾರಣಗಳಾಗಿವೆ. ಆದ್ದರಿಂದ ಒಂದು ಸಮಸ್ಯೆಯ ಕಾರಣವಿಮರ್ಶೆ ಅನಿವಾರ್ಯವಾಗಿ ಇನ್ನೊಂದರದೂ ಆಗುತ್ತದೆ. ಮನುಷ್ಯ ಮನುಷ್ಯನ ನಡುವಿನ ಶೋಷಣೆಗೆ ಪರಿಹಾರವನ್ನು ತಾತ್ವಿಕವಾಗಿ ಹುಡುಕುವಾಗ ಹೆಣ್ಣಿನ ಶೋಷಣೆಯ ಸಮಸ್ಯೆಯ ಪರಿಹಾರವೂ ಪರೋಕ್ಷವಾಗಿ ದೊರಕುವ ಸಾಧ್ಯತೆಯಿದೆ.

ಗಂಡು ರಾಜಕೀಯ, ವರ್ಗ ಮತ್ತು ಧಾರ್ಮಿಕಶೋಷಣೆಗೆ ಒಳಗಾಗುತ್ತಾನೆ. ಹೆಣ್ಣು ಈ ಮೂರರ ಜತೆಗೆ ಗಂಡೂ ಸೇರಿ ನಾಲ್ಕು ಶೋಷಣೆಗಳಿಗೆ ಒಳಗಾಗುತ್ತಾಳೆ ಎನ್ನುವ ಮಾತು ನಮ್ಮ ಸಂದರ್ಭದಲ್ಲಿ ಅಕ್ಷರಶಃ ನಿಜವಾಗುತ್ತದೆ. ಭಾರತೀಯ ಹೆಣ್ಣಿನ ಬಗ್ಗೆ ಚರ್ಚಿಸುವಾಗ, ಆರ್ಥಿಕ ಕಾರಣಗಳ ಜೊತೆಗೆ ಜಾತಿ ಮುಂತಾದ ಸಾಮಾಜಿಕ ವ್ಯವಸ್ಥೆಗಳೂ ಅವಳ ಶೋಷಣೆಯಲ್ಲಿ ಭಾಗವಹಿಸಿವೆ ಎಂಬುದನ್ನು ಗಮನಿಸಬೇಕು. ವ್ಯವಸ್ಥೆಯ ತಳಹದಿಯಾದ ಆರ್ಥಿಕತತ್ವವು ಅದರ ಮೇಲ್ಮೈರಚನೆಯನ್ನು ನಿರ್ದೇಶಿಸಿರುವುದಲ್ಲದೆ ಆ ಮೇಲ್ಮೈರಚನೆಯಲ್ಲೇ ಸ್ವತಃ ಸಂಭವಿಯಾದ ಪಿಡುಗುಗಳು ಹುಟ್ಟಿ ಒಟ್ಟು ವ್ಯವಸ್ಥೆಯನ್ನೇ ಇನ್ನೂ ಹದಗೆಡಿಸಿರುವುದು ಭಾರತೀಯ ಸಾಮಾಜಿಕ ರಚನೆಯ ದುರಂತವಾಗಿದೆ. ಇಂಥ ವ್ಯವಸ್ಥೆಯಲ್ಲಿ, ಸಾಮಾಜಿಕ ದೃಷ್ಟಿಕೋನದೊಡನೆ ಹೆಣ್ಣಿನ ಸ್ಥಾನವನ್ನು ಚಾರಿತ್ರಿಕ ಘಟ್ಟಗಳಲ್ಲಿ ಪರಿಶೀಲಿಸುವುದು ಅವಶ್ಯಕವಾಗುತ್ತದೆ.

ಮನುಷ್ಯನ ಚರಿತ್ರೆಯಲ್ಲಿ ಅವನ ಅಲೆಮಾರಿ ಜೀವನ ಮೊದಲ ಘಟ್ಟ. ಮನುಷ್ಯ ಗುಂಪುಗಳಲ್ಲಿ ಸಂಚರಿಸುವುದನ್ನು ಕಲಿತಾಗ ವೈಯಕ್ತಿಕ ಸಂಬಂಧಗಳು ಹೆಚ್ಚು ಸೂಕ್ಷ್ಮವಾದವು. ಆದರೆ ಯಾವುದೇ ಲೈಂಗಿಕ ಕಟ್ಟುಪಾಡುಗಳು ಇರಲಿಲ್ಲ. ಎಂದರೆ ವಿಶಿಷ್ಟವಾದ ವ್ಯಕ್ತಿಐಕ್ಯವುಳ್ಳ ವಿವಾಹ ಸಂಸ್ಥೆಯ ಉಗಮವಾಗಿರಲಿಲ್ಲ. ಹುಟ್ಟಿದ ಮಗುವಿನ ಪ್ರತ್ಯಕ್ಷ ರಕ್ತಸಂಬಂಧಿ ತಾಯಿಯೊಬ್ಬಳೇ ಆಗಿದ್ದರಿಂದ ಸಂಬಂಧವನ್ನು ತಾಯಿಯ ಮೂಲಕವೇ ನಿರ್ದೇಶಿಸುವುದು ರೂಢಿಯಲ್ಲಿತ್ತು. ಮಕ್ಕಳಮೇಲೆ ತಾಯಿಗೆ ಮಾತ್ರ ಹಕ್ಕು ಇತ್ತು. ಈ ಮೂಲಕ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ರೂಢಿಗೆ ಬಂತು ಎಂದು ಸಮಾಜಶಾಸ್ತ್ರಜ್ಞರು ವಿವರಿಸುತ್ತಾರೆ. ಗರ್ಭಧಾರಣೆ, ಹೆರಿಗೆಗಳನ್ನು ನಿಸರ್ಗ ಹೆಣ್ಣಿನಪಾಲಿಗೆ ಕೊಟ್ಟಿರುವುದರಿಂದ ಮಕ್ಕಳಪಾಲನೆ ಪೋಷಣೆಗಳು ಸಹಜವಾಗಿ ಅವಳ ಭಾಗಕ್ಕೆ ಬರುವಂತಾಯಿತು. ನೈಸರ್ಗಿಕ ಕಾರಣಗಳಿಂದುಂಟಾದ ಸ್ತ್ರೀ ಪ್ರಾಧಾನ್ಯವನ್ನು ಮುಂದಿನ ಆರ್ಥಿಕತತ್ವದ ಉಗಮವು ಸಡಿಲಗೊಳಿಸಿತು.

ಎರಡನೆಯ ಹಂತದಲ್ಲಿ ಬೇಸಾಯ, ಪಶುಪಾಲನೆಗಳು ಆರಂಭವಾದಾಗ ಆರ್ಥಿಕತೆಯ ಉಗಮವಾಯಿತು. ಇವೆರಡೂ ಈವರೆಗೆ ಇಲ್ಲದಿದ್ದ ಹೊಸ ಸಾಮಾಜಿಕ ಬಾಂಧವ್ಯಗಳನ್ನು ರೂಪಿಸಿದವು ಎನ್ನಬಹುದು. ಪ್ರಾಣಿಗಳು ಇಡೀ ಬಣಕ್ಕೆ ಸೇರಿದ್ದವು. ಅವು ಆಹಾರಕ್ಕೆ ಸಾಧನವೂ ಆಗಿದ್ದವು. ಮನುಷ್ಯರ ಗುಂಪು ಒಂದು ಕಡೆ ನೆಲೆ ನಿಲ್ಲಲು ಕಲಿತಾಗ ತಮಗೂ, ಪ್ರಾಣಿಗಳಿಗೂ ಅದೇ ಜಾಗದಲ್ಲೇ ಆಹಾರವನ್ನು 'ತಯಾರಿಸಿ'ಕೊಳ್ಳುವ ವಿಧಾನವನ್ನು ಕಂಡುಹಿಡಿಯಬೇಕಾಯಿತು. ನಿಲ್ಲಲು 'ಮನೆ'ಗಳನ್ನು ಕಟ್ಟಿಕೊಳ್ಳಬೇಕಾಯಿತು. ಮಾನವ ಜನಾಂಗದಲ್ಲಿ 'ಉತ್ಪಾದನೆ' ಮತ್ತು 'ಆಸ್ತಿ'ಯ ಮೊದಲ ಹಂತ ಇವುಗಳೇ ಎನ್ನಬಹುದು. ಉತ್ಪಾದನೆಗೆ ರೂಪಿಸಿಕೊಂಡ ಕೆಲವು ಆಯುಧಗಳು ಮೊದಲ ಉಪಕರಣಗಳಾದವು. ಆಗಲೇ ಇತಿಹಾಸದಲ್ಲಿ ಪ್ರಥಮ ಶ್ರಮ ವಿಭಜನೆ ನಡೆದದ್ದು. ಆಹಾರ ಸಂಗ್ರಹಣೆಯೂ ಅದಕ್ಕೆ ಬೇಕಾದ ಉಪಕರಣಗಳ ತಯಾರಿಕೆಯೂ ಪಶುಪಾಲನೆಯೂ ಗಂಡಸಿದ ಪಾಲಿಗೆ ಬಂದರೆ, ಮಕ್ಕಳ ಪಾಲನೆ, ಆಹಾರ ಸಿದ್ಧ ಮಾಡುವುದು, ಆಹಾರಶೇಖರಣೆ ಹೆಂಗಸಿನ ಪಾಲಿಗೆ ಬಂದವು. ಉತ್ಪಾದನೆಯ ಸಾಧನಗಳಾದ ಎಲ್ಲ ಉಪಕರಣಗಳೂ ಗಂಡಸಿನ ಕೈಯಲ್ಲೇ ಉಳಿದವು ಎಂಬುದನ್ನು ಇಲ್ಲಿ ಗಮನಿಸಬಹುದು. ಮಾನವ ಇತಿಹಾಸದ ಮೊದಲಿಂದಲೂ ಉತ್ಪಾದನಾಕ್ರಿಯೆಯಲ್ಲಿ ಹೆಣ್ಣಿಗೆ ಭಾಗವಹಿಸಲು ಅವಕಾಶವಾಗಲಿಲ್ಲ. ಜೀವನಾಧಾರಗಳ ಸಾಧನಗಳೆಲ್ಲ ಗಂಡಸಿನ ಕೈಯಲ್ಲಿದ್ದುದರಿಂದ, ಸಂಪತ್ತು ಹೆಚ್ಚುತ್ತಬಂದಂತೆಲ್ಲ ಕುಟುಂಬ ವ್ಯವಸ್ಥೆಯಲ್ಲಿ ಗಂಡಸಿಗೆ ಹೆಚ್ಚು ಪ್ರಾಮುಖ್ಯ ಬಂದಿತು. ಆರ್ಥಿಕವಾಗಿ ಗಂಡಸಿಗೆ ಮನ್ನಣೆ ಸಿಕ್ಕಿತು.

ಆದರೆ ಸಾಮಾಜಿಕವಾಗಿ ತಾಯಿ ಹಕ್ಕು ಇನ್ನೂ ಉಳಿದಿತ್ತು. ಏಕಮುಖ ದಾಂಪತ್ಯದ ಉಗಮವಾಗಿರಲಿಲ್ಲವಾದ್ದರಿಂದ ಹುಟ್ಟಿದ್ದ ಮಕ್ಕಳ ತಂದೆಯ ನಿರ್ಧಾರ ಅಸಾಧ್ಯವಾಗಿ, ಅವರನ್ನು ತಾಯಿಯ ಸಂಬಂಧದಿಂದಲೇ ನಿರ್ದೇಶಿಸುವ ವಾಡಿಕೆಯಿತ್ತು. ಇದರಿಂದ ಆಸ್ತಿಯ ವಿಲೇವಾರಿ ಮಕ್ಕಳಲ್ಲಿ ನಡೆಯದೆ, ತಂದೆಯ ಅಥವಾ ತಾಯಿಯ ಬಂಧುಗಳಲ್ಲಿ ನಡೆಯುತ್ತಿತ್ತು. ಇದನ್ನು ತಪ್ಪಿಸಲು ಸಾಮಾಜಿಕ ಸಂಬಂಧಗಳ ಬದಲಾವಣೆ ಅನಿವಾರ್ಯವಾಯಿತು. ಇದಕ್ಕಾಗಿ ಏಕನಿಷ್ಠ ದಾಂಪತ್ಯವನ್ನು ಎಂದರೆ ಒಬ್ಬ ಹೆಂಗಸಿಗೆ ಒಬ್ಬನೇ ಗಂಡ ಇರುವಂಥ ಸಾಮಾಜಿಕ ಬಾಂಧವ್ಯವನ್ನು ರೂಢಿಗೆ ತರಲಾಯಿತು. ಇದರಿಂದ ಮಕ್ಕಳ ತಂದೆಯನ್ನು ಗುರುತಿಸುವುದು ಸುಲಭವಾಗಿ ಉತ್ತರಾಧಿಕಾರದ ಸಮಸ್ಯೆ ಬಗೆಹರಿಯಿತು. ಉತ್ಪಾದನೆ, ಆಸ್ತಿ ಶೇಖರಣೆಗಳ ಆರಂಭವು ಏಕನಿಷ್ಠ ವಿವಾಹ ಪದ್ಧತಿಯ ಉಗಮಕ್ಕೆ ಪ್ರೇರಕವಾಯಿತು. ಎಂದರೆ ಆರ್ಥಿಕತೆಯು ಆರಂಭವಾಗಿ ಸಾಮಾಜಿಕ ಸಂಬಂಧಗಳನ್ನು ನಿಯಂತ್ರಿಸುವ ಶಕ್ತಿಯನ್ನು ಪಡೆದುಕೊಂಡಿತು.

ಮಕ್ಕಳನ್ನು ತಂದೆಯ ಸಂಬಂಧದಿಂದ ಗುರುತಿಸಲು ಆರಂಭವಾದಾಗ, ಕುಟುಂಬವ್ಯವಸ್ಥೆಯಲ್ಲಿ ಮೊದಲೇ ಆರ್ಥಿಕವಾಗಿ ಮೇಲುಗೈಯಾಗಿದ್ದ ಗಂಡಸು ಸಾಮಾಜಿಕವಾಗಿಯೂ ಪ್ರಾಧಾನ್ಯಗಳಿಸುವುದು ಕಷ್ಟವಾಗಲಿಲ್ಲ. ಹೀಗಾಗಿ ಪಿತೃಪ್ರಧಾನ ಕುಟುಂಬವ್ಯವಸ್ಥೆ ರೂಪುಗೊಂಡಿತು. ಆರ್ಯರು ಭಾರತಕ್ಕೆ ಬಂದಾಗ ಅವರಲ್ಲಿ ಈ ವ್ಯವಸ್ಥೆಯೇ ಜಾರಿಯಲ್ಲಿತ್ತು. ಮಾತೃಪ್ರಧಾನ ಕುಟುಂಬದ ಇಳಿಮುಖವು ಸ್ತ್ರೀಯ ಮೊದಲ ಪರಾಜಯ ಎಂಬ ಮಾತು ನಿಜವಾದದ್ದು. ಗಂಡಸು ಮನೆಯಲ್ಲೂ ಅಧಿಕಾರ ವಹಿಸುವಂತಾಗಿ ಗಂಡಿನ ಸುತ್ತ ತಿರುಗುವ ಕುಟುಂಬವ್ಯವಸ್ಥೆಯ ನಿರ್ಮಾಣವಾಯಿತು.

ಆರ್ಥಿಕ ತತ್ವವೊಂದರ ಉಗಮ ಸಾಮಾಜಿಕ ಸಂಬಂಧಗಳನ್ನು ನಿರ್ದೇಶಿಸುತ್ತದೆ ಎನ್ನುವುದಕ್ಕೆ ಈ ಘಟ್ಟದಲ್ಲಿ ಇನ್ನೊಂದು ನಿದರ್ಶನವೂ ಸಿಗುತ್ತದೆ. ಮನುಷ್ಯ ತನಗೆ ಅಗತ್ಯವಾದುದಕ್ಕಿಂಥ ಹೆಚ್ಚಿನದನ್ನೇ ಉತ್ಪಾದಿಸಲು ಆರಂಭಿಸಿದಾಗ ಅವು ಒಂದು ಕಡೆ ಸೇರುತ್ತಾ ಬಂದು ಹೊಸ ಆಸ್ತಿಯ ರೂಪತಾಳಿದವು. ಇವುಗಳ ಯಜಮಾನಿಕೆ ಗಂಡಸಿಗೆ ಸೇರಿದ್ದರಿಂದ ಅವನು ಅದರ ರಕ್ಷಣೆಗೆ ಉಪಾಯಗಳನ್ನು ಹುಡುಕಿದ. "ಇದರ ಮೊದಲ ಬಲಿ ತಾಯಿಹಕ್ಕಿನ ನಿರ್ನಾಮ". ಆಸ್ತಿಗಳಿಕೆ ಆರಂಭವಾದಾಗ ಮನುಷ್ಯನ ದೈಹಿಕ ಶಕ್ತಿಗೆ ವಿನಿಮಯದ ಬೆಲೆ ಬಂದಿತು. ಉತ್ಪಾದನೆಯ ಉಪಕರಣಗಳನ್ನು ಹೊಂದಿದ್ದವನು ಈ ದೈಹಿಕ ಶಕ್ತಿಯನ್ನು ಕೊಂಡುಕೊಳ್ಳುವುದು ಆರಂಭವಾಯಿತು. ಜೀತಗಾರಿಕೆಯ ಮೊದಲಹಂತ ಇದೇ. ಮೊದಲು ಮನೆಯಲ್ಲಿ ಹೆಣ್ಣಿನ ಶಕ್ತಿಯನ್ನು ಕುಟುಂಬದ ರಕ್ಷಣೆಗಾಗಿ ಬಳಸಿಕೊಳ್ಳುತ್ತಿದ್ದ ಯಜಮಾನ ಬೇರೆಯವರ ಶಕ್ತಿಯನ್ನು ತನ್ನ ಹಿತಕ್ಕಾಗಿ ಬಳಸಿಕೊಳ್ಳಲು ಆರಂಭಿಸಿದ. 'ಉತ್ಪಾದನೆ'ಯು ಆಸ್ತಿಶೇಖರಣೆಯನ್ನೂ ತಂದೆಹಕ್ಕನ್ನೂ ಜೀತಗಾರಿಕೆಯನ್ನೂ ಒಟ್ಟಿಗೆ ಸೃಷ್ಟಿಸಿತು. ಮನುಷ್ಯ ತನ್ನ ಜೀವಧಾರಣೆಗೆ ಅಗತ್ಯವಾದುದಕ್ಕಿಂಥ ಹೆಚ್ಚಾಗಿ ಉತ್ಪಾದಿಸುವುದನ್ನು ಉದ್ಯೋಗ ಮಾಡಿಕೊಂಡಾಗ, ಆ ವಲಯದಲ್ಲಿದ್ದ ಗಂಡಸು ಸರ್ವಾಧಿಕಾರ ಪಡೆದು ಹೆಣ್ಣು ಅವಳಿಗೆ ಅಧೀನಳಾಗಿರುವಂತೆ ಆಯಿತು. ಕುಟುಂಬದಲ್ಲಿ, ಸಮಾಜದಲ್ಲಿ ಶೋಷಣೆ ಆರಂಭವಾಯಿತು.

ಆಸ್ತಿ, ಸಂಪತ್ತುಗಳು ಸಮಾಜದಲ್ಲಿ ನಿರ್ಮಾಣವಾದಾಗ ಅವುಗಳ ರಕ್ಷಣೆ ಮುಖ್ಯ ಸಮಸ್ಯೆಯಾಯಿತು. ಬಣಗಳ ನಡುವೆ ಅದಕ್ಕಾಗಿ ಕದನ ನಡೆಯದಂತೆ ಎಚ್ಚರಿಕೆ ವಹಿಸಬೇಕಾಯಿತು. ಇದಕ್ಕಾಗಿ ಹೊಸದೊಂದು ಹೊಣೆಗಾರಿಕೆ ಸೃಷ್ಟಿಯಾಯಿತು. ಆರ್ಥಿಕವಾಗಿ ಬಲಶಾಲಿಯಾದವನನ್ನು ರಕ್ಷಣೆಗಾಗಿ ನಿಯಮಿಸಿ, ಅದರೊಡನೆ ಪಡೆಗಳನ್ನು ಕಟ್ಟುವ ಅಗತ್ಯ ತಲೆದೋರಿತು. ಆರ್ಥಿಕತೆ ಮುನ್ನಡೆದಂತೆ ಅದರ ರಕ್ಷಣೆಗಾಗಿ ಹೊಸದೊಂದು ವರ್ಗ, ಶ್ರೀಮಂತ ಭೂಮಾಲೀಕರೊಂದಿಗೆ ಸಿದ್ಧವಾಯಿತು. ಇದು ಮುಂದೆ ಒಂದು ಸಾಮಾಜಿಕ ಸಂಸ್ಥೆಯಾಗಿ ಬೆಳೆಯಿತು. ಇಲ್ಲಿಗೆ ಸಮಾಜ ಅನಿವಾರ್ಯವಾಗಿ ಹಾದು ಬರಬೇಕಾಗಿದ್ದ ಒಂದು ಘಟ್ಟವನ್ನು ತಲುಪಿದಂತಾಯಿತು. ಈ ವೇಳೆಗಾಗಲೇ ಸಾಮಾಜಿಕ ಅಂತಸ್ತಿನಲ್ಲಿ ಎರಡನೇ ಸ್ಥಾನದಲ್ಲಿದ್ದ ಹೆಣ್ಣಿಗೆ ಬೆಳೆಯುತ್ತಿರುವ ಆರ್ಥಿಕ ವಲಯದಲ್ಲಿ ಪ್ರವೇಶವೇ ಸಿಗಲಿಲ್ಲ. ಈ ಘಟ್ಟದಲ್ಲಿ ಬೇಸಾಯವೇ ಉತ್ಪಾದನೆಯ ಮುಖ್ಯ ಸಾಧನವಾಗಿದ್ದರೂ ಅದಕ್ಕೆ ಪೂರಕವಾಗಿ ಅನೇಕ ರೀತಿಯ ವೃತ್ತಿಗಳು ಉಗಮಗೊಂಡವು. ನಮ್ಮ ದೇಶದಲ್ಲಿ ಮುಂದೆ ಇವೇ ಜಾತಿ ವ್ಯವಸ್ಥೆಗೂ ಅಡಿಗಲ್ಲಾದವೆಂದು ಹೇಳಲಾಗುತ್ತದೆ. ಉತ್ಪಾದನೆ ಹೆಚ್ಚಿದಂತೆಲ್ಲ ದೈಹಿಕ ಶಕ್ತಿಗೆ ವಿನಿಮಯದ ಬೆಲೆ ಬಂದು ಅದಕ್ಕೆ ಬೇಡಿಕೆ ಹೆಚ್ಚಾಯಿತು. ಕೆಲಸ ಮಾಡುವವರು ಭೂಮಾಲೀಕರು ಇವರ ನಡುವಿನ ಅಂತರ ಹೆಚ್ಚಾಯಿತು.

ಇದು ಮುಂದುವರೆದಂತೆ ಹೊಸ ನಾಗರಿಕತೆಯ ನಿರ್ಮಾಣವಾಯಿತು. ಉತ್ಪಾದನೆಯಾದ ವಸ್ತುಗಳ ವಿತರಣೆಗೆ ಹೊಸದೊಂದು ವರ್ಗ ಹುಟ್ಟಿಕೊಂಡಿತು. ಇದರ ಮುಂದುವರಿಕೆಯೇ ಬಂಡವಾಳಷಾಹಿ ವ್ಯವಸ್ಥೆ. ಅತ್ಯಂತ ಶ್ರೀಮಂತ ಭೂಮಾಲೀಕರು, ಮಧ್ಯಸ್ಥಿಕೆದಾರರು ಈಗ ಹೊಸ ಆಕಾರಗಳನ್ನು ತಳೆದರು. ಈಗ ಹೆಣ್ಣಿನ ಸ್ಥಾನವೂ ಬದಲಾಯಿತು. ಬಂಡವಾಳದಿಂದ ಹೊಸ ಹೊಸ ಉದ್ಯಮಗಳು ಬೆಳೆದಂತೆಲ್ಲ ದುಡಿಯುವ ಕೈಗಳಿಗೆ ಬೇಡಿಕೆ ಹೆಚ್ಚಾಯಿತು. ಇದುವರೆಗೆ ಹೆಣ್ಣಿನ ಉತ್ಪಾದನಾ ಶಕ್ತಿಯ ಅರಿವೇ ಇರಲಿಲ್ಲ. ಅದು ಬದಲಾಗಿ ಹೆಣ್ಣಿನ ದುಡಿಯುವ ಶಕ್ತಿಗೂ ವಿನಿಮಯದ ಬೆಲೆ ಬಂದಿತು. ಮೊದಲು ಕುಟುಂಬ ವ್ಯವಸ್ಥೆಯಲ್ಲಿ ಮಾತ್ರ ಶೋಷಣೆಗೆ ಒಳಗಾಗಿದ್ದ ಹೆಣ್ಣು ಈಗ ಹೊರಗಿನ ಸಮಾಜ ವ್ಯವಸ್ಥೆಯಲ್ಲೂ ಪ್ರವೇಶಿಸಿ, ಅಲ್ಲಿ ದುಡಿಯುವುದರಿಂದ ಎರಡು ರೀತಿಯ ಶೋಷಣೆಗಳಿಗೆ ತುತ್ತಾದಳು ಎಂದು ಈ ಬದಲಾವಣೆಯನ್ನು ಅರ್ಥೈಸುವುದು ಸಮಂಜಸವಾಗಿದೆ. ಕುಟುಂಬದಲ್ಲಿನ ಮತ್ತು ವ್ಯವಸ್ಥೆಯಲ್ಲಿನ ಆರ್ಥಿಕ ಶಕ್ತಿಯ ಕೇಂದ್ರೀಕರಣ ಇದರಿಂದ ಒಂದಿಷ್ಟೂ ಬದಲಾಗಲಿಲ್ಲ ಎನ್ನುವುದನ್ನು ಗಮನಿಸಬೇಕು.

ಕುಟುಂಬದಲ್ಲಿ ಗಂಡಸಿನ ಪ್ರಾಬಲ್ಯ ಹೆಚ್ಚಾದಾಗ ಹೆಣ್ಣು ಮೂಲೆಗೊತ್ತರಿಸಲ್ಪಟ್ಟಳು. ಏಕನಿಷ್ಠ ವಿವಾಹ ಗಂಡಸಿಗೆ ಅನ್ವಯಿಸಲಿಲ್ಲ. ಮಕ್ಕಳ ವಂಶವನ್ನು ಗಂಡಸಿನ ಮೂಲಕ ನಿರ್ಧರಿಸುವುದು ಜಾರಿಗೆ ಬಂದದ್ದರಿಂದ ಗಂಡಸು, ತನ್ನ ಮಕ್ಕಳು ತನ್ನವೇ ಎಂದು ಖಚಿತ ಮಾಡಿಕೊಳ್ಳಲು ಹೆಂಡತಿಯ ಲೈಂಗಿಕ ಸ್ವಾತಂತ್ರ್ಯವನ್ನು ನಿರ್ಬಂಧಗೊಳಿಸಬೇಕಾಯಿತು. ಇದಕ್ಕಾಗಿ ಗಂಡನ ಬಗ್ಗೆ ಹೆಣ್ಣಿಗಿರುವ ಏಕನಿಷ್ಠೆಯನ್ನು ಪಾತಿವ್ರತ್ಯವೆಂದು ಹೆಸರಿಸಿ ಹೆಚ್ಚಾಗಿ ಆದರ್ಶೀಕರಿಸಲಾಯಿತು.

(ಮುಂದುವರೆಯುವುದು)

[ಅಖಿಲಭಾರತ ಮಹಿಳಾ ಸಮ್ಮೇಳನದ ವಿಶೇಷ ಲೇಖನ]

# ಮಹಿಳಾ ಚಳುವಳಿ ಯಥಾದೃಷ್ಟಿ

ಮೂಲ : ಇ.ಎಂ.ಎಸ್.
ಅನು: ಎಲ್. ಗಾಯತ್ರಿದೇವಿ

ಒಂದೂವರೆ ಶತಮಾನಗಳಿಗೂ ಮುಂಚೆ ಬಂಗಾಳದಲ್ಲಿ ನಡೆದೊಂದು ಘಟನೆಯು ಭಾರತದ ಮಹಿಳೆಯ ಸಮಸ್ಯೆಗಳ ಮೇಲೆ ಖಂಡಿತಾ ಬೆಳಕು ಚೆಲ್ಲುವಂತಹುದು. ಇಲ್ಲಿ ನಾನು ಉಲ್ಲೇಖಿಸುತ್ತಿರುವುದು ರಾಜಾ ರಾಮ ಮೋಹನರಾಯ್ ಅವರ ಸಹೋದರನ ಸಾವು ಮತ್ತು ಆತನ ಪತ್ನಿ 'ಸತಿ'ಯಾದ ಬಗೆಗೆ ಈ ಹಿರಿಯ ಸಮಾಜ ಸುಧಾರಕನ ಜೀವನ ಚರಿತ್ರೆ ಬರೆದಾತನೊಬ್ಬ ಆ ಘಟನೆಯನ್ನೂ ಹೀಗೆ ವ್ಯಾಖ್ಯಾನಿಸಿದ್ದಾನೆ:

ಆಕೆ ಅಂಥ ಭೀಕರ ಕ್ರಮಕ್ಕೆಗೊಳ್ಳುವ ಮುನ್ನ ರಾಮ್‌ಮೋಹನ್ ರಾಯ್ ಅವರು ಆಕೆಯನ್ನೂ ತಡೆಯಲು ಪ್ರಯತ್ನಿಸಿದ್ದರೆಂದು ಹೇಳಲಾಗಿದೆ. ಆದರೆ ಅದು ವಿಫಲವಾಯಿತು. ಆದರೆ ಯಾವಾಗ ಬೆಂಕಿಯ ಜ್ವಾಲೆ ಆಕೆಯನ್ನು ತಟ್ಟಿತೋ ಆಗ ಆಕೆ ಚಿತೆಯಿಂದ ಹೊರಬರಲು ಯತ್ನಿಸಿದಳು; ಆಕೆಯ ಸಂಪ್ರದಾಯಬದ್ಧ ಬಂಧುಗಳೂ ಪುರೋಹಿತರೂ ಬೊಂಬಿನ ಗಳುಗಳ ಮೂಲಕ ಆಕೆಯನ್ನೂ ಅದರೊಳಗೆ ಬಲಾತ್ಕಾರದಿಂದ ಅದುಮಿದರಲ್ಲದೆ, ಆಕೆ ಅಲ್ಲೇ ಸಾಯುವಂತೆ ಮಾಡಿದರು; ಅವಳ ಕಿರಚಾಟವನ್ನೂ ಮರೆಮಾಡಲು ಡೋಲು ಮುಂತಾದ ವಾದ್ಯಗಳನ್ನೂ ಜೋರಾಗಿ ಬಾರಿಸಲಾಗುತ್ತಿತ್ತು. ಆಕೆಯನ್ನು ಕಾಪಾಡಲಾಗದೆ, ಹೇಳಲಾಗದಂಥ ರೋಷ ಮತ್ತು ಕನಿಕರ ತುಂಬಿದ ರಾಮ್‌ಮೋಹನ್, ಆ ಕ್ಷಣದಲ್ಲಿಯೇ ಕ್ರೂರ ಪದ್ಧತಿಗಳು ಬೇರು ಸಮೇತ ಕೀಳದ ಹೊರತು ತಾವು ವಿಶ್ರಾಂತಿ ಪಡೆಯುವುದಿಲ್ಲವೆಂದು ತಮ್ಮಲ್ಲೇ ಶಪಥಮಾಡಿಕೊಂಡರು. ಅವರು ತಮ್ಮ ಶಪಥವನ್ನೂ ನೆರವೇರಿಸಿದರೂ ಕೂಡ-19 ವರ್ಷಗಳು ಪೂರ್ಣಗೊಳ್ಳುವ ಮುನ್ನ, ಆ ಶಪಥಕ್ಕೆ ಪೂರಕವಾಗಿ 1829ರ ಡಿಸೆಂಬರ್ 4ರಂದು ಸರ್ಕಾರದ ಆಜ್ಞೆ ಮೂಲಕ ಸತಿಪದ್ಧತಿಯನ್ನೂ ರದ್ದುಗೊಳಿಸಿತು.

ಇದು ಕಳೆದುಹೋದ ಇತಿಹಾಸ, ಮತ್ತೆ ಬರುವುದಿಲ್ಲವೆಂದು ನಮ್ಮಲ್ಲಿ ಕೆಲವರು ಹೇಳಬಹುದು. ಆದರೆ ಇಂದಿಗೂ 'ಸತಿ' ಘಟನೆಗಳ ವರದಿಗಳು ಬರುತ್ತಲೇ ಇವೆ. ರಾಮ್‌ಮೋಹನ್‌ರಾಯ್ ಅವರ ಸಹೋದರನ ಪತ್ನಿಯಂತೆಯೇ ನೂರಾರು ವಿಧವೆಯರನ್ನೂ ಬಲಾತ್ಕಾರದಿಂದ ತಮ್ಮ ಪತಿಯ ಚಿತೆವರುವಂತೆಮಾಡಲಾಗುತ್ತಿದೆ.

ಆದರೆ ಈಗ 'ಸತಿ'ಯ ಅಕ್ರಮ ಮತ್ತು ಸಂಬಂಧಿಸಿದವರನ್ನು ಬಂಧಿಸಿ ಅವರ ಮೇಲೆ ಕೈಗೊಳ್ಳಲಾಗುತ್ತದೆ. ಇಷ್ಟಾದರೂ ಬ್ರಿಟಿಷ್ ಸರ್ಕಾರ ಕಿತ್ತುಹಾಕಿದ್ದ 'ಸತಿ' ಪದ್ಧತಿಯು ಅಲ್ಲಲ್ಲೇ ಜರುಗುತ್ತಿದೆ; ಅಲ್ಲದೆ ಈಗಿನ ಸರ್ಕಾರದ ನಾಯಕಿ ಮಹಿಳೆ ಬೇರೆ! ಈ ಪರಂಪರೆ, ಸಂಪ್ರದಾಯಗಳು ಹೇಗೆ ನಮ್ಮ ಮಹಿಳೆಯರ ಮೇಲೆ ದಬ್ಬಾಳಿಕೆ ನಡೆಸುತ್ತಿದೆಯೆಂಬುದಕ್ಕೆ ಇದಕ್ಕಿಂತ ಬೇರೆ ನಿದರ್ಶನಗಳು ಬೇಕೆ? ಆದರೂ, ನಾವು ನಮ್ಮ ಮಹಿಳೆಯರನ್ನು 'ಪೂಜಿಸುತ್ತೀವೆ' ಎಂದು ಹೇಳುತ್ತೇವೆ!

## ಸಮಾಜ ಸುಧಾರಣಾ ಚಳುವಳಿ

ಬಂಗಾಳದಲ್ಲಿ ರಾಜಾರಾಮ ಮೋಹನರಾಯ್ ಆರಂಭಿಸಿದ ಸಮಾಜ ಸುಧಾರಣಾ ಚಳುವಳಿಯು ರಾಷ್ಟ್ರದ ಮುಂದಿನ ಪೀಳಿಗೆಯ ಮೇಲೆ ತೀವ್ರ ಪ್ರಭಾವ ಬೀರಿತು. ಹಂತಹಂತವಾಗಿ ಅದು ಭಾರತ ಸಮಾಜದ ಪುನರ್ ನಿರ್ಮಾಣದ (ಸಾಮಾಜಿಕ. ಸಾಂಸ್ಕೃತಿಕ ಮತ್ತು ಆರ್ಥಿಕ) ಚಳುವಳಿಯಾಗಿ ರೂಪುಗೊಂಡಿತು; ಅಂತಿಮವಾಗಿ ಅದು ಸ್ವಾತಂತ್ರ್ಯಕ್ಕೆ ರಾಜಕೀಯ ಚಳುವಳಿಯಾಗಿ ಅಭಿವೃದ್ಧಿ ಹೊಂದಿತು. ಹೀಗಾಗಿ, ಸಮಾಜ ಸುಧಾರಣಾ ಚಳುವಳಿ (ಮಹಿಳಾ ವಿಮೋಚನೆಯೂ ಸೇರಿದಂತೆ) ಮತ್ತು ವಿದೇಶಿ ಹಿಡಿತದಿಂದ ಹೊರಬರಲು ಭಾರತ ಸ್ವಾತಂತ್ರ್ಯ ಹೋರಾಟ. ಒಂದಕ್ಕೊಂದು ಪೂರಕವಾದವು. ರಾಜಕೀಯ ಸ್ವಾತಂತ್ರ್ಯಹೋರಾಟವನ್ನು ಕಡೆಗಾಣಿಸಿರುವ ಸಮಾಜಸುಧಾರಕರೂ ಇದ್ದಾರೆ ಹಾಗೂ ರಾಜಕೀಯ ಹೋಟದ ಕೆಲವು ಶಕ್ತಿಶಾಲಿಗಳು ಸಮಾಜ ಸುಧಾರಣೆಗೆ ವಿರೋಧಿಸಿದವರೂ ಇದ್ದಾರೆ; ಆದರೂ ರಾಜಕೀಯ ಸ್ವಾತಂತ್ರ್ಯ ಚಳುವಳಿಯ ಪ್ರತಿಯೊಂದು ಹೆಜ್ಜೆಯೂ ಭಾರತದ ಮಹಿಳೆ ತನ್ನ ವಿಮೋಚನೆಯಲ್ಲಿ ಹಲವು ಹೆಜ್ಜೆ ಮುಂದೆ ಬರುವಂತೆ ಮಾಡಿತೆಂಬ ವಾಸ್ತವಾಂಶವೂ ಸತ್ಯ. ಸಂಘಟಿತ ಮಹಿಳೆಯರು ಸ್ವಾತಂತ್ರ್ಯ ಆಂದೋಲನದಲ್ಲಿ ಮೇಲುಗೈ ಪಡೆದಿದ್ದರು.

ಸ್ವಾತಂತ್ರ್ಯ ಚಳುವಳಿ ಅಥವಾ ಸಾಮಾಜಿಕ ಹೋರಾಟವು ಮಹಿಳಾ ವಿಮೋಚನಾ ಹೋರಾಟದ ಮೇಲೆ ನೇರ ಪ್ರತಿಸ್ಪಂದಿಸುವಂಥವು. ಅಂದರೆ, ಸಾಮಾನ್ಯ ಪ್ರಜಾಸತ್ತಾತ್ಮಕ ಸಾಮಾಜಿಕ ಮತ್ತು ದುಡಿಯುವ ವರ್ಗದ ಚಳುವಳಿಯು ಮಹಿಳಾ ವಿಮೋಚನಾ ಚಳುವಳಿಯೊಂದಿಗೆ ಎಷ್ಟು ಸಮಗ್ರವೆಂದರೆ ಅವೆರಡರಲ್ಲೊಂದುಮುನ್ನೆಜ್ಜೆ ಇರಿಸಬಯಸಿದರೂ ಎರಡೂ ಸರಿಸಮನಾಗಿಯೇ ಮುಂದೆ ಸಾಗಬೇಕು.

ಈ ಸಂದರ್ಭದಲ್ಲಿ ಮಹಿಳಾ ವಿಮೋಚನೆ ಮತ್ತು ಮಹಿಳೆಯರ ಸಂಘಟನೆ ಬಗೆಗೆ (ಅಂದಿನ) ಭಾರತದ ರಾಷ್ಟ್ರೀಯ ಕಾಂಗ್ರೆಸ್ ಹಾಗೂ ಮುಂದೆ ಎಡಪಂಥೀಯ ಚಳವಳಿಗಳು, ಪಕ್ಷಗಳೂ, ಕಾರ್ಮಿಕ ಸಂಘಟನೆಗಳೂ ಕೈಗೊಂಡ ಕ್ರಮಗಳನ್ನೂ ಇಲ್ಲಿ ಸ್ಮರಿಸಬೇಕು. ಈ ಸಂಘಟನೆಗಳು ತಮ್ಮ ಮೂಲ ಹೋರಾಟದೊಂದಿಗೆ ಮಹಿಳಾ ವಿಮೋಚನೆ ಕುರಿತ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿದ್ದವು.

ಇದು ಸಂಘಟಿತ ಮಹಿಳಾ ಚಳುವಳಿ ಹಾಗೂ ಸಮಾಜ ಸುಧಾರಣಾ ಚಳುವಳಿಗಳು ಬ್ರಿಟಿಷ್ ಆಳ್ವಿಕೆಯಲ್ಲೇ ಕಾನೂನುಗಳನ್ನು ಮಾಡಲು ಒತ್ತಾಯಿಸಲು ನೆರವಾಯಿತು. 1829ರಲ್ಲಿ ಸತಿನಿರ್ಬಂಧವಾದ ಮೇಲೆ ಸ್ತ್ರೀ ಶಿಕ್ಷಣ, ವಿಧವೆಯರ ಪುನರ್ವಿವಾಹ, ಬಾಲ್ಯ ವಿವಾಹಕ್ಕೆ ತಡೆ ಉಂಟುಮಾಡಲು ವೈವಾಹಿಕ ವಯೋಮಿತಿಯಲ್ಲಿ ಏರಿಕೆ ಇವೇ ಮುಂತಾದವುಗಳಿಗೆ ಕ್ರಮಕೈಗೊಳ್ಳಲಾಯಿತು. ರಾಷ್ಟ್ರೀಯ ಸರಕಾರ ಸ್ಥಾಪನೆಗೊಂಡಮೇಲೆ ಈ ಕ್ರಮಗಳು ಮತ್ತಷ್ಟು ಕ್ಷಿಪ್ರಗೊಂಡವು.

## ಹೋರಾಟದ ಪ್ರಮಾಣಗಳು

ಬ್ರಿಟಿಷರು ಭಾರತ ಬಿಟ್ಟು ಹೋಗಿ 34 ವರ್ಷಗಳಾದರೂ ಅತೀ ಹಳೆ ನಂಬಿಕೆಯಾದ ಸ್ತ್ರೀ "ಬಾಲ್ಯದಲ್ಲಿ ತಂದೆಗೂ, ಯೌವನದಲ್ಲಿ ಗಂಡನಿಗೂ ಮತ್ತು ವೃದ್ಧಾಪ್ಯದಲ್ಲಿ ಮಗನಿಗೂ ವಿಧೇಯಳಾಗಿರಬೇಕು; ಯಾವಾಗಲೂ ಅವಳು ಸ್ವತಂತ್ರಳಲ್ಲ" ಎಂಬುದು ಇಂದಿಗೂ ಮಾಸದೆ ಉಳಿದಿದೆ. ಇದಕ್ಕೆ ಎರಡು ಕಾರಣಗಳುಂಟು: ವಿವಾಹ, ಪಿತ್ರಾರ್ಜಿತ ಆಸ್ತಿ ಮತ್ತು ಕುಟುಂಬ ಜೀವನದ ಇತರ ಅನೇಕ ವಿಷಯಗಳ ಬಗೆಗಿನ ಕಾನೂನು ರೂಪಿಸಿದ್ದರೂ ಸ್ತ್ರೀ-ಪುರುಷರ ನಡುವಣ ಕಾನೂನು ಸಮಾನತೆ ಅಪೂರ್ಣವಾಗಿಯೇ ಇದೆ. ಸಂವಿಧಾನದಲ್ಲಿ 'ಅಲ್ಪಸಂಖ್ಯಾತರ ಹಕ್ಕುಗಳ ಬಗ್ಗೆ ಪರಿಗಣಿಸಿರುವ ರೀತಿಯನ್ನೂ ನೋಡಿದರೆ ಹಿಂದೂ ಸ್ತ್ರೀ ತನ್ನ ಮುಸ್ಲಿಂ ಅಥವಾ ಕ್ರಿಶ್ಚಿಯನ್ ಸೋದರಿಯರಿಗಿಂತಾ ಒಳ್ಳೆಯ ಸ್ಥಾನದಲ್ಲಿದ್ದಾಳೆಂದೇ ಹೇಳಬಹುದು. ಆದರೂ ಸ್ತ್ರೀ-ಪುರುಷರ ನಡುವಣ ಸಂಪೂರ್ಣ ಸಮಾನತೆಗೆ ಇನ್ನೂ ಅನೇಕ ಕಂದರಗಳನ್ನು ಮುಚ್ಚಬೇಕಾಗಿದೆ.

ಎರಡನೆಯದಾಗಿ, ಹಲವು ಕಡೆಗಳಲ್ಲಿ ಕಾನೂನು ಏನೂ ಪ್ರಭಾವ ಬೀರುವುದೇ ಇಲ್ಲ; ಸಂಪ್ರದಾಯ (ಆಚಾರ)ದ ಮತ್ತು ಇತರ ಅನೇಕ ಅಂಶಗಳ ಬಲವು ಕಾನೂನನ್ನೂ ನಿಷ್ಕ್ರಿಯಗೊಳಿಸುತ್ತದೆ. ಅಸ್ಪೃಶ್ಯತೆ ವಿರೋಧಿ ಕಾನೂನು ಹಾಗೂ ಇತರ ಅನೇಕ ಸಾಮಾಜಿಕ ಸುಧಾರಣಾ ಕಾನೂನುಗಳಂಥ ವರದಕ್ಷಿಣೆ ವಿರೋಧಿ ಕಾನೂನು ಕೂಡ ನಿಷ್ಕ್ರಿಯಗೊಂಡಿರುವುದು ಅಂಥ ಕಾನೂನುಗಳ ಅನುಷ್ಠಾನಕ್ಕೆ ಶಕ್ತಿಯುತ ಚಳವಳಿಯ ಅಗತ್ಯವಿದೆಯೆಂಬುವುದನ್ನು ಒತ್ತಿ ಹೇಳುತ್ತವೆ.

ನನ್ನ ರಾಜ್ಯವಾದ ಕೇರಳದಲ್ಲಿನ ಒಂದು ಉದಾಹರಣೆ ತೆಗೆದುಕೊಳ್ಳುತ್ತೇನೆ. ತಂದೆಯ ಹೆಣ್ಣು ಮತ್ತು ಗಂಡು ಮಕ್ಕಳಿಬ್ಬರಿಗೂ ಸಮಾನ ಹಕ್ಕು ನೀಡುವಂತೆ ಕ್ರಿಶ್ಚಿಯನ್ನರ ಪಿತ್ರಾರ್ಜಿತ ಕುರಿತಾದ ತಿದ್ದುಪಡಿ ಮಾಡುವ ಬಗ್ಗೆ ಕಾನೂನು ಸಚಿವರು ಪ್ರಕಟಣೆಯೊಂದನ್ನು ಮಾಡಿದರು. ಅದರವಿರುದ್ಧ ಕೂಗಾಟ ಎಬ್ಬಿಸಿದ ಜನ ವಾದಿಸಿದ್ದೇನು ಗೊತ್ತೆ? ತಂದೆ ಮಗಳಿಗಾಗಿ ವರದಕ್ಷಿಣೆಯೂ ಸೇರಿದಂತೆ ಮದುವೆಗೆ ವಿಪರೀತ ಖರ್ಚು ಮಾಡಬೇಕಾಗುತ್ತದೆ. ಈ ಬೃಹತ್ ಖರ್ಚಿನೊಂದಿಗೆ ಆಸ್ತಿಯಲ್ಲಿಯೂ ಮಾಡಬೇಕಾಗುತ್ತದೆ. ಈ ಬೃಹತ್ ಖರ್ಚಿನೊಂದಿಗೆ ಆಸ್ತಿಯಲ್ಲಿಯೂ ಸಮಾನ ಪಾಲು ಪಡೆಯುವುದನ್ನು ಅವನೆಂತು ಸಹಿಸಿಯಾನು ಇಂಥ ವಾದಗಳೇ ಬಂದವು. ಆಸ್ತಿಯಲ್ಲಿ ಹೆಣ್ಣು-ಗಂಡು ಮಕ್ಕಳಿಗೆ ಸಮಾನ ಹಕ್ಕಿರಬೇಕೆಂದು ತತ್ವಶಃ ಒಪ್ಪುವ ಜನರೂ ವರದಕ್ಷಿಣೆ ಕಾನೂನು ವಿರೋಧವಾದರೂ ಅದನ್ನು ನೀಡುವ ವ್ಯವಸ್ಥೆ ರದ್ದಾಗುವ ತನಕ) ವಾಸ್ತವಿಕವಾಗಿ ತಂದೆಗೆ ಎರಡೂ ಹೊರೆಯನ್ನು ಹೊರುವುದು ಸಾಧ್ಯವಿಲ್ಲವೆಂದು ಸೂಚಿಸಿ ಹೇಳಿದರು

ಸಮಾಜವು ಆಧುನಿಕಗೊಳ್ಳಬೇಕಾದರೆ, ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಮತ್ತು ಇತರ ಮಹಿಳೆಯರು-ಹಿಂದೂಗಳಲ್ಲಿಯೂ ಮತಾತ್ಕರ, ವಾಯುಭಾಗ ಮತ್ತು ಇತರ ಅನೇಕ ಪದ್ಧತಿಗಳನ್ನೂ ಅನುಸರಿಸುತ್ತಿರುವವರು-ಪುರುಷರೊಂದಿಗೆ ಸಮಾನ ಹಕ್ಕು ಉಳ್ಳ ಆಧುನಿಕ ಏಕಪತಿತ್ವ-ಏಕಪತ್ನಿತ್ವ ಕುಟುಂಬದ ಭಾದಕಗಳನ್ನು ಅನುಭವಿಸುವಂತಾಗಬೇಕು. ಆದುದರಿಂದ ಮಹಿಳೆಯ ಹೋರಾಟವನ್ನು ರೈತರ, ಕಾರ್ಮಿಕರ ಹೋರಾಟದೊಂದಿಗೆ ಕೊಂಡೊಯ್ಯಬೇಕಾದುದು ಅತ್ಯಗತ್ಯ.

## ದಾಸ್ಯದ ಹೊಸ ರೂಪಗಳು

ಸಮಾಜ ಪಲ್ಲಟಕ್ಕೇ ಸಂಬಂಧಿಸಿದ ಇತರ ಅನೇಕ ಸಮಸ್ಯೆಗಳನ್ನು ಮಹಿಳೆಯರು ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳೇಕೆ ಉಲ್ಬಣಿಸೀವೆಯೆಂದರೆ ಶತಮಾನದಿಂದಲೂ ಭಾರತದ ಸಮಾಜವು ಆಧುನಿಕರಣದತ್ತ ಸಾಗುತ್ತಿದೆ. ಇದರ ಫಲಿತಾಂಶವೆಂದರೆ ಹೆಚ್ಚು ಹೆಚ್ಚು ಮಹಿಳೆಯರು ಶಿಕ್ಷಿತಗೊಳ್ಳುತ್ತಿದ್ದಾರೆ, ಸ್ವತಂತ್ರ ಉದ್ಯೋಗಗಳ ಅವಕಾಶ ಸಿಗುತ್ತದೆ. ಆಸ್ತಿಗೆ ಕಾನೂನು ಹಕ್ಕು ಅಂಗೀಕಾರವಾಗಿದೆ ಹಾಗೂ ಪೂರ್ಣ ನಿರ್ಬಂಧಿತ ವಿವಾಹ ಬದುಕೂ ವಿಮೋಚನೆಗೊಳ್ಳುತ್ತದೆ. ಆದರೆ ಇವು ಭಾರತದ ಸಮಾಜವನ್ನು ಬಂಡವಾಳ ಅಭಿವೃದ್ಧಿಯತ್ತ ಒಯ್ಯುತ್ತಿದೆ; ಮಹಿಳೆಯರಿಗೆ ಹಳೆ ನಿರ್ಬಂಧಗಳು ಹೋಗಿ ಹೊಸ ಬಂಧನಗಳು ಕಾಣುತ್ತಿವೆ; ಹಳೇ ಸಂಕೋಲೆ ಮುರಿದಿದೆ ಆದರೆ ಪಾರ್ಶ್ವವಾಗಿ ಹೊಸ ಸಂಕೋಲೆ ಮೂಡುತ್ತಿವೆ.

ಉದ್ಯೋಗ; ಕೂಲಿ ಮತ್ತು ಕೆಲಸದ ಸ್ಥಿತಿಗತಿ; ಬಾಡಿಗೆ, ಸಾಲ, ತೆರಿಗೆ ಮತ್ತು ಇತರ ವಿಷಯಗಳು; ಅಗತ್ಯ ಸಾಮಾನುಗಳ ಬೆಲೆ ಗಗನ ಮುಟ್ಟುವಿಕೆ ಇವೇ ಮುಂತಾದವುಗಳ ಬಗ್ಗೆ ಕಾರ್ಮಿಕ ಸಂಘಗಳೂ ಮತ್ತು ಇತರ ಪ್ರಜಾಸತ್ತಾತ್ಮಕ ಸಂಸ್ಥೆಗಳು ಸಾಕಷ್ಟು ಸಾಮಗ್ರಿ ಒದಗಿಸಿವೆ. ಇಲ್ಲಿ ಹೆಚ್ಚು ಒತ್ತು ಕೊಡಬೇಕಾಗಿರುವುದೇನೆಂದರೆ ಶ್ರಮಿಕ ವರ್ಗದ ಈ ಎಲ್ಲ ಸಮಸ್ಯೆಗಳಲ್ಲಿ ಮಹಿಳೆಯರು ಇನ್ನೂ ಹೆಚ್ಚಿನ ಪ್ರತಿಕೂಲ ಸ್ಥಿತಿಯಲ್ಲಿದ್ದಾರೆ ಎಂಬುವುದಕ್ಕೆ.

ಕೆಲಸ ಕೊಡುವಾಗ ಮಹಿಳೆಯರು ಕೊನೆ ಸ್ಥಾನಪಡೆದರೆ ಕೆಲಸದಿಂದ ತೆಗೆಯುವಾಗ ಮೊದಲ ಬಲಿಯಾಗುತ್ತಾರೆ. ಕಡಿಮೆ ಕೂಲಿಗೆ ಗಂಡಸರು ಮಾಡುವಷ್ಟೇ ಕೆಲಸವನ್ನು ಅವರೂ ಮಾಡಬೇಕಾಗುತ್ತದೆ. ಕಾರ್ಖಾನೆಗಳಲ್ಲಿ, ಕಚೇರಿಗಳಲ್ಲಿ ಅಥವಾ ಹೊಲದಲ್ಲಿ ದಿನವಿಡಿ ಕೆಲಸ ಮಾಡಿದ ಮೇಲೆ ಮನೆಗೆ ಹಿಂತಿರುಗಿ ಗೃಹಕೃತ್ಯದ ಹೊಣೆ ಹೊರಬೇಕು. ಇದಲ್ಲದೆ, ಬಹಳಷ್ಟು ಮಹಿಳೆಯರು ಮೇಲಾಧಿಕಾರಿಯ ಮುಂದೆ, ಕಾರ್ಯ ಕ್ಷೇತ್ರದ ಹಾದಿಯಲ್ಲಿ ಅಪಮಾನಿತರಾಗುವ ಸಂದರ್ಭಗಳುಂಟು; ಜೊತೆಗೆ ರೌಡಿ ಶಕ್ತಿಗಳು ಸದಾ ಕಾದಿರುತ್ತವೆ.

ಬಂಡವಾಳಶಾಹಿ ಸಮಾಜದಲ್ಲಿ ಮಹಿಳೆಯರನ್ನು ನೋಡುವ ಹೇಯ ರೀತಿಯನ್ನೂ ಮಾರ್ಕ್ಸ್ ಮತ್ತು ಏಂಗಲ್ಸ್ ಅವರು ತಮ್ಮ ಕಮ್ಯುನಿಸ್ಟ್ ಮ್ಯಾನಿಫೆಸ್ಟೋದಲ್ಲಿ ರೇಖಾತ್ಮಕವಾಗಿ ವಿವರಿಸಿದ್ದಾರೆ, ಕುಟುಂಬ ಮತ್ತು ಶಿಕ್ಷಣ, ಹಾಗೂ ತಂದೆ ತಾಯಿ ಮತ್ತು ಮಗುವಿನ ಸಂಬಂಧ ಕುರಿತು ಬೂರ್ಜ್ವಾಗಳ ರಂಜನೀಯ ಮಾತು ಅಸಹ್ಯ ಉಂಟುಮಾಡುತ್ತವೆ; ಆಧುನಿಕ ಕೈಗಾರಿಕೆ ಕ್ರಿಯೆಯಿಂದ ಶ್ರಮಜೀವಿಯ ಕುಟುಂಬಪಾಶ ಕಡಿದು ತುಂಡಾಗುತ್ತದೆ ಮತ್ತು ಅವರ ಮಕ್ಕಳು ವಾಣಿಜ್ಯೋದ್ಯಮದ ವಸ್ತುಗಳಾಗಿ ಹಾಗೂ ಶ್ರಮದ ಸಾಧನವಾಗುತ್ತಾರೆ.

(ಮುಂದುವರೆಯುವುದು)

# ಜನತೆಯ ಐಕ್ಯಹೋರಾಟಗಳಲ್ಲಿ ಸಹಭಾಗಿಗಳಾಗಿ

[3ನೇ ಪುಟದಿಂದ]

ಕೆಳಮಟ್ಟದಲ್ಲಿರುವವರ ಬಗೆ ಕಣ್ಣೀರು ಸುರಿಸುತ್ತಾರಾದರೂ, ಶೋಷಣೆಯ ಮೂಲಕ ಈ ಬಡತನವನ್ನು ನಿರ್ಮಿಸುವವರ ಬಗ್ಗೆ ಗಮನ ಹರಿಸುವದಿಲ್ಲ. ಬಡತನವನ್ನು ಬಡವರ ನಡುವೆಯೇ ಹಂಚುವದಲ್ಲದೇ ಅವರ ಎಲ್ಲ ಕ್ರಮಗಳ ಗುರಿಯೂ ಬಂಡವಾಳಗಾರರಿಗೆ ರಕ್ಷಣೆ ನೀಡುವುದೇ ಆಗಿದೆ.

ಅವರ ಈ ಆದಾಯ ಮತ್ತು ಕೂಲಿ ನೀತಿಯು, ವಿದೇಶಿ ಬಹುರಾಷ್ಟ್ರೀಯ ಕಂಪನಿಯೊಂದರ ಡೈರೆಕ್ಟರೊಬ್ಬರು ತಯಾರಿಸಿದ ಭೂತಲಿಂಗಂ ಕಮಿಟಿ ವರದಿಯ ಕಾರ್ಬನ್ ಪ್ರತಿಯಲ್ಲದೇ ಬೇರೆನೂ ಅಲ್ಲ.

ಯಾವುದೇ ಕಾಳಜಿಯುಳ್ಳ ಆದಾಯ ಮತ್ತು ಕೂಲಿ ನೀತಿಯ ಉದ್ದೇಶ ಆದಾಯವನ್ನು ವಿವಿಧ ವರ್ಗಗಳ ನಡುವೆ ಪುನರ್ ಹಂಚುವುದು; ಈ ಮೂಲಕ ಆರ್ಥಿಕ ಅಸಮಾನತೆಯನ್ನು ನೀಗುವುದು ಮತ್ತು ಕೆಳಮಟ್ಟದಲ್ಲಿರುವ ರೈತಕೂಲಿಕಾರರ ಆದಾಯವನ್ನು ಹೆಚ್ಚಿಸುವುದು; ಕೇವಲ ಶೋಷಿತರಲ್ಲೇ ಇರುವ ಸಣ್ಣಪುಟ್ಟ ತಾರತಮ್ಯಗಳನ್ನು ದೊಡ್ಡದನ್ನಾಗಿ ತೋರಿಸುವುದನ್ನು ಬಿಟ್ಟು ಈಗಾಗಲೇ ವಿಶೇಷ ಸವಲತ್ತುಳ್ಳ ಮತ್ತು ಅಧಿಕ ಲಾಭಪಡೆಯುತ್ತಿರುವ ಏಕಸ್ವಾಮ್ಯ ಸಂಸ್ಥೆಗಳ ಕೊಳ್ಳೆಯನ್ನು ತಡೆಗಟ್ಟಿದರೆ ಮಾತ್ರ ಇದು ಸಾಧ್ಯ ಯೋಜನಾಗಾರರು ಇದನ್ನು ಮರೆಯುತ್ತಾರೆ. ಇದಕ್ಕೆ ವಿರುದ್ಧವಾಗಿ ಶೋಷಣೆಮಾಡುವ ವರ್ಗಕ್ಕೆ ಅನುವುಮಾಡಿಕೊಡುವುದಲ್ಲದೇ ಸಂಪತ್ತಿನ ಪುನರ್ ಹಂಚಿಕೆಯನ್ನು ಪ್ರತಿಪಾದಿಸುವುದರಲ್ಲಿ ವಿಫಲರಾಗಿದ್ದಾರೆ.

ಈ ವರ್ಗಗಳ ಆದಾಯವನ್ನು ಸಣ್ಣ ಬಂಡವಾಳಗಾರರ ಆದಾಯವೆಂದು ಭ್ರಮಿಸಿ ಯಾವುದೇ ನಿಯಂತ್ರಣ ಅಥವಾ ಪುನರ್ ಹಂಚಿಕೆಯಿಂದ ತಪ್ಪಿಸಿಕೊಳ್ಳಲು ಅನುವುಮಾಡಿಕೊಟ್ಟಿದ್ದಾರೆ. "ಕೃಷಿ ಉತ್ಪಾದನೆಯು ಹೆಚ್ಚಬೇಕಾದರೆ ಪ್ರಮುಖವಾಗಿ ರೈತರಿಗೆ ಉತ್ತೇಜನ ನಿರಂತರವಾಗಿರಬೇಕು. ಜೊತೆಗೆ ಸಂಪತ್ತು ಮತ್ತು ಆರ್ಥಿಕ ವಿಕೇಂದ್ರೀಕರಣದ ಉದ್ದೇಶವನ್ವಯ ಖಾಸಗಿ ಕೈಗಾರಿಕಾ ಬಂಡವಾಳ ಹೂಡಿಕೆಗೂ ಉತ್ತೇಜನವಿರಬೇಕು". ಕಾಂಗ್ರೆಸ್ ಸರ್ಕಾರವಾಗಲಿ, ಯೋಜನಾಗಾರರಾಗಲಿ ಈ ಅಂಶಗಳನ್ನು ತೀವ್ರವಾಗಿ ಪರಿಗಣಿಸಿಲ್ಲವೆಂಬುದು ಎಲ್ಲರಿಗೂ ತಿಳಿದಿದೆ. ಯೋಜನಾ ಅವಧಿಯ ಈ ಮೂರು ದಶಕಗಳಲ್ಲಿ ಆರ್ಥಿಕ ಕೇಂದ್ರೀಕರಣ ಹಾಗೂ ಏಕಸ್ವಾಮ್ಯ ಒಡೆತನ ತೀವ್ರವಾಗಿ ಬೆಳೆದಿದೆ.

ಈ ಯೋಜನಾಗಾರರು "ಆದಾಯದ ರಕ್ಷಣೆ"ಗೆ ಬೇಕಾದ ಇನ್ನೊಂದು ವಿಭಾಗವನ್ನು ಮರೆತಿಲ್ಲ- ಭೂತಲಿಂಗಂ ವರದಿಯಂತೆ. ಈ ವಿಭಾಗವೇ ಆಡಳಿತ ಸಿಬ್ಬಂದಿ ವರ್ಗ. ಪ್ರಸ್ತುತ ಆದಾಯ ನೀತಿಗಳು ಆಡಳಿತ ಜಾಣಾಕ್ಷ ಜನರನ್ನು ಆಕರ್ಷಿಸುವುದಿಲ್ಲವೆಂಬ ಹೆದರಿಕೆ ಇದೆ. ಈ ಜನರನ್ನು ಆಕರ್ಷಿಸಲು ಸೂಕ್ತವಾದ ಸಂಬಳ, ಆದಾಯ ವ್ಯವಸ್ಥೆಯನ್ನು ರೂಪಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಭೂಮಾಲೀಕರು-ಬಂಡವಾಳಗಾರರ ಆದಾಯವನ್ನು ಮುಟ್ಟುವುದಿಲ್ಲವೆಂಬ ಆಶ್ವಾಸನೆ ಕೊಟ್ಟು ಯೋಜನಾಗಾರರು ಭಾರತದ ಬಡತನದ ಕಡೆ ತಮ್ಮ ಗಮನಹರಿಸುತ್ತಾರೆ. ಆದಾಯ ನೀತಿಯ ಮುಖ್ಯ ಗುರಿ ದುರ್ಬಲ ಹಾಗೂ ಬಡವರ ಆದಾಯ ಮಟ್ಟವನ್ನು ಏರಿಸುವುದು(ಬಂಡವಾಳಗಾರ ಭೂಮಾಲೀಕರ ಹಿಡಿತವನ್ನು ತಪ್ಪಿಸದೆ, ಭೂಸುಧಾರಣೆಗಳನ್ನು ಜಾರಿಗೆ ತರದೆ) ಇದರೊಟ್ಟಿಗೆ ಗ್ರಾಮೀಣ ಅಭಿವೃದ್ಧಿ ಯೋಜನೆ ಮತ್ತು ಗುಡಿ ಕೈಗಾರಿಕೆಗಳನ್ನು ಉದಾಹರಿಸಲಾಗುತ್ತದೆ.

“ಆದಾಯ ನೀತಿ”ಯ ಒಟ್ಟು ಉದ್ದೇಶವೇ ದುಡಿಯುವ ವರ್ಗದ ಮತ್ತು ನೌಕರರ ಕೂಲಿ ಹಾಗೂ ಆದಾಯಗಳ ಮೇಲೆ ದಾಳಿ ಮಾಡುವುದು.

ಕೈಗಾರಿಕೆಯಿಂದ, ಕೈಗಾರಿಕೆಯಲ್ಲಿರುವ ವೇತನ ವ್ಯತ್ಯಾಸಗಳನ್ನು ಕಂಡು ಹಿಡಿದಿದ್ದಾರೆ ಮತ್ತು ಇದೊಂದು ದೊಡ್ಡ ಕಂಟಕವೆಂದು ಭಾವಿಸಲಾಗುತ್ತಿದೆ. ಕೆಲವು ಉದ್ಯಮಗಳಲ್ಲಿರುವ ಸಂಬಳ ಅವಶ್ಯಕತೆಗಳಿಗನುಗುಣವಾದುದೇ ಅಥವಾ ಜೀವನ ವೆಚ್ಚಕ್ಕನುಗುಣವಾದುದೇ ಅಥವಾ ಐಶಾರಾಮದ ಸಂಬಳವೇ ಎಂಬುದನ್ನೇ ಪ್ರಸ್ತಾಪಿಸುವುದಿಲ್ಲ. ಕೋಟ್ಯಾಧೀಶರು ಮತ್ತು ಕಾರ್ಮಿಕರ ನಡುವಿನ ತಾರತಮ್ಯವನ್ನು ಒಪ್ಪುವ ಈ ಜನ ಕಾರ್ಮಿಕರಲ್ಲಿರುವ ವೇತನ ವ್ಯತ್ಯಾಸಗಳನ್ನು ಸಮಾನಗೊಳಿಸುವ ಬಗ್ಗೆ ಮಾತನಾಡುತ್ತಾರೆ. ಇವರ ಉದ್ದೇಶ ಹೆಚ್ಚುವರಿ ಕೂಲಿಯನ್ನು ಕೆಳಮಟ್ಟಕ್ಕಿಳಿಸುವುದೇ ಆಗಿದೆ; ಕಡಿಮೆ ಕೂಲಿಯನ್ನು ಹೆಚ್ಚಿಸುವುದಲ್ಲ. ಸಂಘಟಿತ ಉದ್ಯಮಗಳಲ್ಲಿ ಹೆಚ್ಚುವರಿ ಕೆಲಸದ ಹೊರೆಯನ್ನು ಕಾರ್ಮಿಕ ಒಪ್ಪದಿದ್ದರೆ ಹೆಚ್ಚುವರಿ ಕೂಲಿಗೆ ಹಕ್ಕಿಲ್ಲವೆನ್ನುತ್ತಿದ್ದಾರೆ. ಕಾರ್ಮಿಕ ಅಧಿಕ ಉತ್ಪಾದನೆ ಮಾಡಿದರೂ ಕೆಲವು ಕಾಲ ಹೆಚ್ಚುವರಿ ವೇತನ ನೀಡಬಾರದೆಂಬ ವಾದವನ್ನು ಮುಂದಿಡಲಾಗುತ್ತಿದೆ. ಇದೇ ಯೋಜನಾಗಾರರ ‘ಆದಾಯ ಹಾಗೂ ವೇತನ ನೀತಿ’.

ಮೇಲಿನ ನೀತಿಯನ್ವಯ ವೈಯಕ್ತಿಕವಾಗಿ ಅಧಿಕ ಶ್ರಮಪಟ್ಟರೆ ಅಧಿಕ ವೇತನ ಸಿಗುತ್ತದೆಂದು ಕಾರ್ಮಿಕ ನಂಬಿದರೆ ಅದೊಂದು ಭ್ರಮೆ. ಒಟ್ಟು ಆರ್ಥಿಕ ವ್ಯವಸ್ಥೆ ಅಧಿಕ ಉತ್ಪಾದನೆಗೆ ಸಿದ್ಧವಿಲ್ಲದಿದ್ದರೆ, ವೈಯಕ್ತಿಕವಾಗಿ ಅದನ್ನು ಮಾಡಲಾಗುವುದಿಲ್ಲ. ಹೆಚ್ಚುವರಿ ಉತ್ಪಾದನೆಗೆ ಪ್ರತಿಯೊಬ್ಬ ಬಂಡವಾಳಗಾರನಿಗೂ ಉತ್ತೇಜನಬೇಕು. ಆದರೆ ಕಾರ್ಮಿಕನಿಗೆ ಆ ಉತ್ತೇಜನಗಳುಬೇಡ ಎಂಬ ಕಲ್ಪನೆಯುಳ್ಳದ್ದಾರೆ. ಅವನು ಇಡೀ ಆರ್ಥಿಕ ವ್ಯವಸ್ಥೆಯ ಪ್ರಗತಿಗೆ ಕಾದುಕೂರಬೇಕಾಗಿದೆ. ಆದರೆ ಈ ಮೇಲಿನದನ್ನು ತಿದ್ದುಪಡಿ ಮಾಡಲಾಗಿದೆ. ಉತ್ಪಾದನೆಯು ತೀವ್ರ ಪ್ರಗತಿ ಸಾಧ್ಯವಿಲ್ಲದಿರುವ ಉದ್ಯಮ ನೌಕರರ ವೇತನದೊಂದಿಗೆ ತಾಳೆ ಹೋದಲು ಉತ್ಪಾದನೆಯು ತೀವ್ರ ಪ್ರಗತಿ ಸಾಧ್ಯವಿರುವ ಉದ್ಯಮ ನೌಕರರು ತಮ್ಮ ಹೆಚ್ಚುವರಿ ಉತ್ಪಾದನೆಗೆ ಕಡಿಮೆ ಹೆಚ್ಚುವರಿ ವೇತನ ಒಪ್ಪಿಕೊಳ್ಳಬೇಕು. ನೀವು ಉತ್ಪಾದನೆಯನ್ನು ತೀವ್ರವಾಗಿ ಹೆಚ್ಚಿಸುವುದಾದರೂ ಅದರ ಪೂರ್ಣ ಫಲ ದೊರೆಯುವುದಿಲ್ಲ. ಕಾಂಗ್ರೆಸ್ ಆಡಳಿತವಿರುವ ರಾಜ್ಯದಲ್ಲಿ ಪೂರ್ಣಾವಧಿ ಕೆಲಸ ಇರುವುದೇ ನಿಮ್ಮ ಅದೃಷ್ಟ. ಹಾಗಿದ್ದು ಹೆಚ್ಚುವರಿ ಉತ್ಪಾದನೆಗೆ ಅಧಿಕ ವೇತನ ಕೇಳುವಂತಿಲ್ಲ. ಈ ದಿನಗಳಲ್ಲಿ ಬೆಲೆಗಳನ್ನು ಸ್ಥಿಮಿತದಲ್ಲಿಡಲು ಮತ್ತು ಯೋಜನೆಯ ಗುರಿಗಳನ್ನು ತಲುಪಲು ಕಾರ್ಮಿಕರು ತಮ್ಮ ನಿಜ ವೇತನದಲ್ಲಿ ಹೆಚ್ಚಳ ನಿರೀಕ್ಷಿಸುವಂತಿಲ್ಲ.

ಇವುಗಳೇ ಆರನೆಯ ಯೋಜನೆಯ ಮುಖ್ಯ ವೈಶಿಷ್ಟ್ಯಗಳಾಗಿವೆ. ಇದಲ್ಲದೆ ಈ ಯೋಜನೆಗಾಗಿ ಸುಮಾರು ಹತ್ತುಸಾವಿರ ಕೋಟಿ ರೂಪಾಯಿಗಳಷ್ಟು ವಿದೇಶೀ ಸಾಲವನ್ನು ಪಡೆಯಬೇಕಾಗಿದೆ. ಈ ಸಾಲದ ಮೊತ್ತವೇ ಯೋಜನೆಯ ಖರ್ಚಿನ ಶೇಕಡ 10ರಷ್ಟಾಗುತ್ತಿದೆ. ಇದರಿಂದಾಗಿ ವಿದೇಶೀ ಸಾಲದ ಹೊರೆ ಜನತೆಯ ಮೇಲೆ ದುಡಿಯುವವರ್ಗದ ಮೇಲೆ ಬಿದ್ದು, ದೇಶವು ಹೆಚ್ಚು ಹೆಚ್ಚಾಗಿ ಪಾಶ್ಚಾತ್ಯ ಸಾಮ್ರಾಜ್ಯಶಾಹೀ ರಾಷ್ಟ್ರಗಳನ್ನು ಅವಲಂಬಿಸಬೇಕಾಗುತ್ತದೆ. ಇದು ಯೋಜನೆಯಲ್ಲಿ ಹೇಳಿಕೊಂಡಿರುವ ಸ್ವಾವಲಂಬನ ತತ್ವದ ಅಣಕವಾಗಿದೆ. ಸಾಮ್ರಾಜ್ಯಶಾಹೀ ದೇಶಗಳ ಸಾಲ ಸೌಲಭ್ಯ ನಮ್ಮ ಸ್ವಾತಂತ್ರ್ಯಕ್ಕೆ ತರುವ ಅಪಾಯವನ್ನು ದುಡಿಯುವ ಜನತೆ ಅರಿತುಕೊಳ್ಳಬೇಕು ಈ ಕಾರಣಕ್ಕಾಗಿಯೇ ವಿದೇಶೀ ಬಹುರಾಷ್ಟ್ರೀಯ ಸಂಸ್ಥೆಗಳಲ್ಲಿ ನಮ್ಮ ಜನರನ್ನು ಶೋಷಿಸುವುದಕ್ಕೆ ಹಾಗೂ ಮಾರುಕಟ್ಟೆಗಳನ್ನು ವಶಪಡಿಸಿಕೊಳ್ಳಲು ಹೆಚ್ಚಿನ ಸ್ವಾತಂತ್ರ ಕೊಡಲಾಗಿದೆ. ಈ ಸಂಸ್ಥೆಗಳು ಇದು ಕೊಬ್ಬಿ ಬೆಳೆದು ದೇಶದ ಕಾನೂನುಗಳನ್ನು ಉಲ್ಲಂಘಿಸುವ ಮಟ್ಟಕ್ಕೆ ಹೋಗಿವೆ.

ಬಹಳ ಕಾಲದಿಂದಲೂ ವಿಶ್ವ ಬ್ಯಾಂಕು ಆಹಾರದ ಸಬ್ಸಿಡಿಯಲ್ಲಿ ಕಡಿತ, ಕೆಲಸಗಾರರಿಗೆ ಕಡಿಮೆ ಸಂಬಳ ಅತಿ ಕಡಿಮೆ ಸಮಾಜ ಕಲ್ಯಾಣ ಕಾರ್ಯಕ್ರಮಗಳನ್ನು ಸಲಹೆ ಮಾಡುತ್ತಾ ಬಂದಿರುವುದು ನಮ್ಮ ದುಡಿಯುವ ಜನತೆಗೆ ತಿಳಿದಿಲ್ಲ.

ಜನತೆಯ ವಿರುದ್ಧ ಆರ್ಥಿಕ ಯುದ್ಧ ಸಾರಿರುವ ಮತ್ತು ಬಂಡವಾಳಗಾರರ, ಜಮೀನುದಾರರ ಹಿತಾಸಕ್ತಿಗೆ ಅನುಗುಣವಾಗಿರುವ ಯೋಜನೆ, ಸಹಜವಾಗಿ ತನ್ನ ಗುರಿಯಾದ ರಾಷ್ಟ್ರೀಯ ಆದಾಯದ ಹೆಚ್ಚಳ, ಅಧಿಕ ಉತ್ಪಾದನೆಯನ್ನು ಸಾಧಿಸಲಾರದೆ, ನಿರುದ್ಯೋಗ ಮತ್ತು ಬಡತನವನ್ನು ಹೆಚ್ಚಿಸುತ್ತಿದೆ.

ಮಾಲೀಕರು ಮತ್ತು ಸರ್ಕಾರದ ಜೊತೆಗೂಡಿ ಬೋನಸ್ ವಿಳಂಬಿತ ಸಂಬಳ (Difered Wages) ಎಂಬ ಕಲ್ಪನೆಯನ್ನು ನಿರ್ಮಾಣ ಮಾಡಲು ಸತತವಾಗಿ ಪ್ರಯತ್ನಿಸುತ್ತಿದೆ. ದುಡಿಯುವ ಜನತೆಯ ಒಂದು ಬಹುಮುಖ್ಯ ಹೋರಾಟದ ಗಳಿಕೆಯಾದ ಬೋನಸ್ ಮೇಲೆ ಪ್ರತ್ಯಕ್ಷ ಹಾಗೂ ಪರೋಕ್ಷ ದಾಳಿ ನಡದೇ ಇದೆ. ತಾತ್ಕಾಲಿಕ ಸವಲತ್ತಿಗಾಗಿ ಬೋನಸ್ಸನ್ನು ಉತ್ಪಾದನೆಗೆ ಸಂಬಂಧಿಸಿದ್ದರಿಂದ ವೇತನ ಸ್ಥಗಿತಕ್ಕೆ ಎಡೆ ಮಾಡಿದಂತಾಗಿದೆ. ಈ ತತ್ವವನ್ನು ಒಪ್ಪಿದ ರೈಲ್ವೆ ನೌಕರರ ಸಂಘಗಳ ನಾಯಕರು ಮೊದಲು ಈ ತಪ್ಪು ಮಾಡಿದರು. ಇವರ ನಂತರ ಹಲವಾರು ಕೇಂದ್ರ ಸರ್ಕಾರದ ನೌಕರರ ಸಂಘಗಳು ಈ ಕುತಂತ್ರಕ್ಕೆ ಬಲಿಯಾದರು.

ಆದರೂ ಹೋರಾಟ ಮುಂದುವರಿಯಲೇಬೇಕು. ದುಡಿಯುವ ಜನತೆ ಜೀವನಾವಶ್ಯ ವೇತನವನ್ನು ಕನಿಷ್ಠ ವೇತನವನ್ನಾಗಿ ಬೋನಸ್ ವೇತನ ಎಂಬ ತತ್ವವನ್ನು ಪಡೆಯುವವರೆಗೂ ಬೋನಸ್ ವಿಳಂಬಿತ ವೇತನ ಎಂಬ ತತ್ವವನ್ನು ಪ್ರತಿಪಾದಿಸಬೇಕು.

ಬೋನಸ್‌ಗೆ ಅರ್ಹರಾದವರು ಆದಾಯದ ಮೇಲೆ ಮಿತಿಹೇರುವ ಪ್ರಯತ್ನ ಎರಡನೆಯ ಆಘಾತ. ತುಟ್ಟಿಭತ್ಯದ ಮೇಲಿನ ಪ್ರಕಾರ ಇನ್ನೊಂದು ರೀತಿಯದು-ತುಟ್ಟಿಭತ್ಯದ ಮೇಲೆ ಮಿತಿ ಕಂತುಗಳಲ್ಲಿ ಪಾವತಿ ಅಥವಾ ನಿಗದಿಪಡಿಸಿದ ಆದಾಯದ ಗೆರೆದಾಟಿರುವವರೆಗೆ ತುಟ್ಟಿಭತ್ಯೆಯ ನಿರಾಕರಣೆ, ಕೊನೆಯದಾಗಿ ವೇತನ ವಿಮರ್ಶೆಗೆ ಇರುವ ಸರ್ವಸಾಮಾನ್ಯ ವಿರೋಧ ಇವುಗಳನ್ನು ಸಾಧಿಸಲು ಸರ್ಕಾರ ತಾನು ಮಾಡಿಕೊಂಡ ಒಪ್ಪಂದಗಳನ್ನು ಮುರಿಯುತ್ತಾ ಬಂದಿದೆ.

ಪಾಲೇಕರ್ ತೀರ್ಪು ಮತ್ತು ಅದನ್ನು ಸರ್ಕಾರ ಜಾಣ್ಮೆಯಿಂದ ತಿರುಚಿದ ರೀತಿ ಸರ್ಕಾರದ ಅಧಿಕೃತ ನೀತಿಗೊಂದು ಕೈಗನ್ನಡಿ. ಒಂದು ದಶಕಕ್ಕೂ ಮೀರಿ ಪತ್ರಿಕೆಗಳ ಒಡೆಯರು ತಮ್ಮ ಕೆಲಸಗಾರರೊಂದಿಗೆ ಯಾವುದೇ ಒಪ್ಪಂದಕ್ಕೆ ಬರಲು ಸಿದ್ಧರಿರಲಿಲ್ಲ. ಸಂಧಾನದ ಪ್ರಯತ್ನಗಳನ್ನೆಲ್ಲಾ ಮುರಿಯುವ ಮಾಲೀಕರನ್ನು ತಹಬಂದಿಗೆ ತರಲು ಸರ್ಕಾರ ಇಚ್ಛಿಸುವುದಿಲ್ಲ. ಪಾಲೇಕರ್‌ರವರ ತಾತ್ಕಾಲಿಕ ತೀರ್ಪು ಹೊರಬಂದಾಗ ಅದನ್ನು ಕಾರ್ಮಿಕರ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಮಾರ್ಪಾಡುಮಾಡಲು ಸರ್ಕಾರ ಒತ್ತಾಯ ತಂದಿತು. ಈಗ ಅಂತಿಮ ತೀರ್ಪು ಬಂದಿರುವಾಗ ಪತ್ರಿಕಾ ಮಾಲೀಕರುಗಳು ಅದನ್ನು ತಡೆಹಿಡಿಯಲು ಉತ್ಸುಕರಾಗಿದ್ದಾರೆ.

ಈ ಆಘಾತಗಳು ಪ್ರಾರಂಭವಾಗಿರುವುದಕ್ಕೆ ಸಾಕಷ್ಟು ಸೂಚನೆಗಳಿವೆ. ಆರನೇ ಯೋಜನೆಯಲ್ಲಿರುವ ನೀತಿಗಳನ್ನು ಜಾರಿಗೆ ತರುವಾಗ ಇವು ಇನ್ನೂ ಹೆಚ್ಚುತ್ತವೆ. ಈ ಆಘಾತಗಳನ್ನು ಇಡೀ ಕಾರ್ಮಿಕರವರ್ಗ ಒಂದಾಗಿ ಎದುರಿಸಬೇಕಾಗಿದೆ.

ಲೋಕೋ ಸಿಬ್ಬಂದಿಯ ದಮನ. ಬೆಂಗಳೂರಿನಲ್ಲಿ ನಡೆಯುತ್ತಿರುವ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಮುಷ್ಕರ, ಜೀವವಿಮಾ ನೌಕರರ ಮೇಲೆ ಹೇರಿರುವ ಸುಗ್ರೀವಾಜ್ಞೆ, ಉತ್ತರಪ್ರದೇಶದಲ್ಲಿ ನಡೆಯುತ್ತಿರುವ ಹಲವಾರು ಕಾರ್ಮಿಕಹೋರಾಟಗಳನ್ನು ಕಾನೂನುಬಾಹಿರವೆಂದು ಘೋಷಿಸಿರುವ ನೀತಿ ಸರ್ಕಾರದ ಧೋರಣೆಯನ್ನು ಸೂಚಿಸುತ್ತದೆ. ಇವುಗಳನ್ನು ವಿರೋಧಿಸಲು ಕಾರ್ಮಿಕರು ಒಗ್ಗಟ್ಟಾಗಿ ಹೋರಾಟಮಾಡಬೇಕಾಗಿದೆ. ಈ ಹೋರಾಟದಲ್ಲಿ ಸರ್ಕಾರದ ವರ್ಗನೀತಿಯನ್ನು ವಿರೋಧಿಸಬೇಕಾಗಿದೆ.

ಸಿ.ಐ.ಟಿ.ಯು. ಪ್ರಾರಂಭದಿಂದಲೂ ಐಕ್ಯಮತ್ಯದ ಹೋರಾಟಗಳಿಗೆ ಮತ್ತು ಕಾರ್ಮಿಕ ಚಳುವಳಿಗೆ ಸಕ್ರಿಯವಾಗಿ ಶ್ರಮಿಸುತ್ತಾ ಬಂದಿದೆ.

ಬ್ಯಾಂಕ್, ಎಲ್.ಐ.ಸಿ., ರೈಲ್ವೇ, ರಕ್ಷಣಾ ಮುಂತಾದ ಉದ್ಯಮಗಳ ಕಾರ್ಮಿಕರು ಕೇಂದ್ರೀಯ ಕಾರ್ಮಿಕ ಸಂಘಗಳಿಂದ ದೂರವಿರುವುದು ಅತ್ಯಂತ ದುರದೃಷ್ಟಕರ ಸಂಗತಿ, ಇದರಿಂದಾಗಿ ದುಡಿಯುವವರ್ಗದ ಹೋರಾಟದ ಶಕ್ತಿ ಕುಂದುತ್ತದೆ. ದುಡಿಯುವ ಜನತೆ ಒಂದೇ ಸಂಘಟನೆಯ ಅಡಿಯಲ್ಲಿ ಬರುವುದಾದರೆ- ನಮ್ಮ ಶಕ್ತಿ ಹಲವುಪಟ್ಟು ಹೆಚ್ಚುತ್ತದೆ, ಹಾಗೂ ದೇಶದ ಆರ್ಥಿಕ, ಕಾರ್ಮಿಕ ನೀತಿಗಳನ್ನು ರೂಪಿಸಲು ಒಂದು ಪ್ರಭಾವಪೂರ್ಣ ಧ್ವನಿಯಾಗುತ್ತದೆ. ಹಲವಾರು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಜುಲೈ 7ರಂದು ಸಭೆ ಸೇರಿ ಬೆಂಗಳೂರು ಮತ್ತು ಹೈದ್ರಾಬಾದ ಸಾರ್ವಜನಿಕ ವಲಯದ ಕಾರ್ಮಿಕರ ಹೋರಾಟಕ್ಕೆ ಬೆಂಬಲ ಸೂಚಿಸಲು ಕರೆಕೊಟ್ಟಿದ್ದವು. ಇದು ಸ್ವಾಗತಾರ್ಹವಾದದ್ದೇ. ಆದರೆ ನಾವು ಇದನ್ನು ಮೀರಿ ನಿಂತಿದ್ದೇವೆ. ಈಗ ನಮಗೆ ಬೇಕಿರುವುದು ಆಗಿಂದ್ದಾಗ್ಗೆ ಪರಸ್ಪರ ಸಮಾಲೋಚನೆ ಹಾಗೂ ಐಕ್ಯಮತ್ಯದ ನಿರ್ಧಾರ.

ಗೆಳೆಯರೇ, ನಮ್ಮ ಸಿ.ಐ.ಟಿ.ಯು. ಕಾರ್ಮಿಕ ಸಂಘಗಳು ದೇಶದಲ್ಲಿ ಬೆಳೆಯುತ್ತಿರುವ ನಿರುದ್ಯೋಗ ಸಮಸ್ಯೆಯನ್ನು ಕಡೆಗಾಣಿಸುವಂತಿಲ್ಲ. ನಾವು ನಿರುದ್ಯೋಗಿಗಳ ಹೋರಾಟದಲ್ಲಿಯೂ ಭಾಗವಹಿಸಬೇಕು. 6ನೇ ಯೋಜನೆಯ ಪ್ರಕಾರ ಗ್ರಾಮೀಣ ಮತ್ತು ನಗರಗಳ ಒಟ್ಟು ನಿರುದ್ಯೋಗಿಗಳ ಸಂಖ್ಯೆ ಯಾವುದೇ ಒಂದು ದಿನದಲ್ಲಿ 21 ಮಿಲಿಯನ್. ಇದು ಒಂದು ತಪ್ಪು ಅಂದಾಜು. ರಿಜಿಸ್ಟರ್ ಮಾಡಿಸಿರುವ ನಗರ ನಿರುದ್ಯೋಗಿಗಳ ಸಂಖ್ಯೆಯೇ 10 ಮಿಲಿಯನ್‌ಗೂ ಮೀರಿದೆ. ಅದು ಕಳೆದ ಮೂರು ವರ್ಷಗಳಲ್ಲಿ ಇನ್ನೂ ಹೆಚ್ಚಾಗಿದೆ.

ಪ. ಬಂಗಾಳದ ವಾಮರಂಗ ಸರ್ಕಾರ ಹಾಗೂ ಕೇರಳದ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಸರ್ಕಾರಗಳು ನಿರುದ್ಯೋಗ ಭತ್ತೆ ನೀಡಲು ಹಾಕಿಕೊಂಡಿರುವ ಕಾರ್ಯಕ್ರಮಗಳು ತೃಪ್ತಿ ತಂದಿರುವ ಕೆಲಸ.

ಎಲ್ಲಾ ಕಾರ್ಮಿಕ ಸಂಘಗಳೂ ನಿರುದ್ಯೋಗ ಭತ್ಯೆಯನ್ನು ಬೇಡಿಕೆಯಾಗಿ ಮುಂದಿಟ್ಟು ಅದಕ್ಕಾಗಿ ಹೋರಾಟ ಕೂಡಿ ನಡೆಸಬೇಕು. ಕೆಲಸದ ಹಕ್ಕನ್ನು ಸಂವಿಧಾನದಲ್ಲಿ ಮೂಲಭೂತ ಹಕ್ಕನ್ನಾಗಿ ಸೇರ್ಪಡೆ ಮಾಡಲು ಕೂಡ ಹೋರಾಡಬೇಕು.

ಗೆಳೆಯರೇ. ಸಿ.ಐ.ಟಿ.ಯು. ತನ್ನ ಮದ್ರಾಸ್ ಸಮಾವೇಶದ ಸಂದರ್ಭದಲ್ಲಿ ಪ್ರತ್ಯೇಕವಾಗಿ ದುಡಿಯುವ ಮಹಿಳೆಯರ ಸಮಾವೇಶವನ್ನು ಏರ್ಪಡಿಸಿತು. ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಪ್ರಶಂಸಾರ್ಹವಾದ ಕೆಲಸವನ್ನು ಮಾಡುತ್ತಾ ತನ್ನ ಕಾರ್ಯಕ್ರಮಗಳಿಂದಾಗಿ ಆಸಕ್ತಿಯನ್ನು ಕೆರಳಿಸಿದೆ. ಆದರೆ ನಮ್ಮ ಸಂಘಗಳು ತಮ್ಮ ಶಕ್ತಿಯನ್ನು ಗಮನಾರ್ಹವಾಗಿ ಹೆಚ್ಚಿಸಿಕೊಳ್ಳಬಲ್ಲ ಈ ವಿಭಾಗದ ಬಗ್ಗೆ ಸಾಕಷ್ಟು ಗಮನಹರಿಸಿದ್ದಾರೆಂದು ಹೇಳಲು ಬರುವಂತಿಲ್ಲ. ಕಾರ್ಮಿಕ ಸಂಘಗಳಲ್ಲಿ ಅವರ ಸದಸ್ಯತ್ವ ಹಾಗೂ ಭಾಗವಹಿಸುವಿಕೆ ತುಂಬಾ ಕಡಿಮೆ ಪ್ರಮಾಣದಲ್ಲಿದ್ದು ಇದರ ಸುಧಾರಣೆಗೆ ವಿಶೇಷವಾಗಿ ಯಾವುದೇ ಕಾರ್ಯಕ್ರಮ ಹಾಕಿಕೊಂಡಿಲ್ಲ. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿರುವ ಸ್ಥಳಗಳಲ್ಲೂ ಕಾರ್ಮಿಕ ಸಂಘಗಳು ಗಂಡಸರ ಸ್ವತ್ತಾಗಿವೆ. ಈ ರೀತಿಯ ಲೋಪದೋಷಗಳನ್ನು ಸರಿಪಡಿಸಲು ಹಾಗೂ ಮಹಿಳೆಯರು ತಮ್ಮ ಹಕ್ಕು ಬಾಧ್ಯತೆಗಳನ್ನು ಪಡೆದು ಕಾರ್ಯಕ್ರಮಗಳಲ್ಲಿ ಭಾಗವಹಿಸಲು, ನಾಯಕತ್ವದಲ್ಲಿ ಪಾಲ್ಗೊಳ್ಳಲು ಅನುಕೂಲವಾಗಲೆಂದೇ ಸಿ.ಐ.ಟಿ.ಯು. ಸಂಘಗಳು ಹಲವಾರು ಮಹಿಳಾ ಸಮನ್ವಯ ಸಮಿತಿಗಳನ್ನು ಸ್ಥಾಪಿಸಿವೆ. ಮಹಿಳೆಯರು ಭಾಗವಹಿಸದಿದ್ದರೆ ಕಾರ್ಮಿಕ ಚಳುವಳಿಯು ನಿಶ್ಶಕ್ತವಾಗುತ್ತದೆ. ಮಹಿಳೆಯರು ದುಡಿಯುವ ವರ್ಗದ ಅವಿಭಾಜ್ಯ ಅಂಗವೆಂದು ತಿಳಿಯಲು ಹೆಚ್ಚಿನ ಸಂಘಗಳು ಮರೆತಿವೆ. ಸಮನ್ವಯ ಸಮಿತಿಗಳ ಸ್ಥಾಪನೆ ಈ ದೌರ್ಬಲ್ಯವನ್ನು ಪರಿಹರಿಸಲು ಮತ್ತು ಕಾರ್ಮಿಕ ಚಟುವಟಿಕೆಗಳಿಗೆ ಸಹಕಾರಿಯಾಗುತ್ತವೆ.

ಗೆಳೆಯರೇ, ಮಹಿಳೆಯರ ವಿರುದ್ಧದ ತಾರತಮ್ಯಗಳು, ಅಸಮಾನ ವೇತನಗಳು ಮುಂತಾದವುಗಳ ವಿರುದ್ಧ ಹೋರಾಟ ಮಹಿಳಾ ಸಂಘಟನೆಗಳ ಜವಾಬ್ದಾರಿ ಎಂದು ಕೆಲವು ನಾಯಕರುಗಳೂ ತಪ್ಪು ತಿಳಿದಿದ್ದಾರೆ. ಮಹಿಳೆಯರೂ ಕಾರ್ಮಿಕ ವರ್ಗದ ಭಾಗ ಎಂಬುದನ್ನು ಇದು ಬಹಿರಂಗವಾಗಿ ನಿರಾಕರಿಸುವಂತಿದೆ. ಮಹಿಳೆಯರ ಸಂಘಟನೆಗಳು ಒಟ್ಟಾರೆ ಮಹಿಳಾ ಸಮೂಹದ ಬೇಡಿಕೆಗಳ ಹೋರಾಟಕ್ಕೆ ಬೆಂಬಲ ನೀಡಿದರೆ ಆಯಾ ಉದ್ಯಮದ ಮಹಿಳೆಯರ ಬೇಡಿಕೆಗಳ ಈಡೇರಿಕೆಗೆ ಹೋರಾಡಬೇಕು.

ಸಮಾಜದ ಬೇರೆಬೇರೆ ವಿಭಾಗಗಳಾದ ವಿದ್ಯಾರ್ಥಿಗಳು, ಎಂಜನಿಯರ್‌ಗಳು ಮತ್ತು ವೈದ್ಯರು ಕಾರ್ಮಿಕ ವರ್ಗದ ಹಾದಿಯನ್ನನುಸರಿಸಿ ಅಧಿಕಾರಿಶಾಹಿ ಸರ್ಕಾರದ ಆರ್ಥಿಕ,ಪ್ರಜಾಸತ್ತಾತ್ಮಕ ವಿರೋಧಿ ಧೋರಣೆಗಳನ್ನು ವಿರೋಧಿಸುತ್ತಿದ್ದಾರೆ. ಲಾಠಿ ಏಟುಗಳು, ಗುಂಡೇಟುಗಳು, ಬಂಧನ ಇವು ವಿದ್ಯಾರ್ಥಿಗಳು ಮತ್ತಿತರರಿಗೆ ಸಿಗುತ್ತಿರುವ ಉಪಚಾರ.

ಇತ್ತೀಚಿನ ಚಳುವಳಿಗಳಲ್ಲಿ ಅತ್ಯಂತ ಮಹತ್ವದ ಅಂಶವೆಂದರೆ ರೈತಾಪಿ ವರ್ಗವು ಹೋರಾಟದಲ್ಲಿ ಪ್ರವೇಶ ಮಾಡಿರುವುದು. ಕರ್ನಾಟಕದಲ್ಲಿ, ಮಹಾರಾಷ್ಟ್ರದಲ್ಲಿ ಹೋರಾಟಕ್ಕಿಳಿದ ರೈತರಿಗೆ ಸಿಕ್ಕಿದ್ದು ಗುಂಡೇಟು-ಜೈಲು. ಆಂಧ್ರ, ಪಂಜಾಬ್‌ನಲ್ಲಿ ಹೋರಾಟ ಮಾಡುತ್ತಿರುವ ರೈತರನ್ನು ಸದೆ ಬಡಿಯಲಾಯಿತು. ಆದರೂ ಚಳುವಳಿ ಮುಂದುವರಿಯುತ್ತಿದೆ. ಹಲವಾರು ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಫಲವಾಗಿದೆ. ಬೆಳೆಗಳಿಗೆ ಸರಿಯಾದ ಬೆಲೆ ಮತ್ತು ಅವರ ಮೇಲಿರುವ ಸಾಲವನ್ನು ಮನ್ನಾ ಮಾಡಬೇಕೆಂದು ಹೊರಟಿರುವ ರೈತ ಚಳುವಳಿಗೆ, ಕೃಷಿ ಕಾರ್ಮಿಕರ ಕೂಲಿ ಮತ್ತಿನ್ನಿತರ ಪರಿಹಾರಗಳಿಗೂ ಸಿ.ಐ.ಟಿ.ಯು. ಬೆಂಬಲ ಸೂಚಿಸುತ್ತದೆ. ರೈತರನ್ನು ಬೆಂಬಲಿಸಿ ಸೌಹಾರ್ದತಾ ಮುಷ್ಕರ ನಡೆಸಿದ ಬೆಂಗಳೂರಿನ ಕಾರ್ಮಿಕರನ್ನು ನಾನು ಅಭಿನಂದಿಸುತ್ತೇನೆ.

ಕಾರ್ಮಿಕರ, ಕೃಷಿಕೂಲಿಕಾರರ ಮತ್ತು ರೈತರ ಸಖ್ಯತೆ ಅತ್ಯಂತ ಬಲಶಾಲಿಯಾದ ಪ್ರಜಾಸತ್ತಾತ್ಮಕ ಹಾಗೂ ಕ್ರಾಂತಿಕಾರೀ ಶಕ್ತಿಯಾಗಿ ಬೆಳೆಯಬಲ್ಲದು. ಮಾತ್ರವಲ್ಲ ಶೋಷಕ ವರ್ಗದ ಯಾವ ಸರ್ಕಾರವೂ ಅದರ ಮುಂದೆ ನಿಲ್ಲಲಾರದು. ರೈತ ಜನತೆಯ ಬೆಂಗಾವಲಾಗಿ ಕಾರ್ಮಿಕ ವರ್ಗವು ನಿಲ್ಲುವುದರ ಮೂಲಕ ಈ ಮೈತ್ರಿಯನ್ನು ರೂಪುಗೊಳಿಸಲು ಸಾಧ್ಯವಾಗುತ್ತದೆ. ಈಗಿನ ವಿಷಮ ಪರಿಸ್ಥಿತಿಯನ್ನು ನೆಲಸಮಮಾಡಿ ಈ ಆಳುತ್ತಿರುವ ವರ್ಗಗಳನ್ನು ಪದಚ್ಯುತಗೊಳಿಸದ ಹೊರತು ಮತ್ತು ಜನತೆಯ ನೈಜ ಆಶೋತ್ತರಗಳನ್ನು ಪ್ರತಿನಿಧಿಸುವ ನಿಜವಾದ ರಾಜ್ಯಶಕ್ತಿಯನ್ನು ಬೆಳೆಸದ ಹೊರತು, ತಮ್ಮ ಮೇಲೆ ನಡೆಯುತ್ತಿರುವ ದಬ್ಬಾಳಿಕೆಗೆ ಕೊನೆಯಾಗಲಿಕ್ಕೆ ಸಾಧ್ಯವಿಲ್ಲವೆಂಬುದನ್ನು ಕಾರ್ಮಿಕವರ್ಗ ಮನಗಾಣಬೇಕು. ಭಾರತದ ಅಗಾಧವಾದ ರೈತ ಶಕ್ತಿಯ ಸಹಭಾಗಿತ್ವವಿಲ್ಲದೆ ಈ ಮಹತ್ಕಾರ್ಯ ಕಷ್ಟಸಾಧ್ಯ.

ಕಾರ್ಮಿಕವರ್ಗದ ಸಹಾನುಭೂತಿ ಮತ್ತು ಮಧ್ಯ ಪ್ರದೇಶ ರೈತ ಹೋರಾಟಕ್ಕೆ ಅತೀ ಶೀಘ್ರವಾಗಿ. ಅತ್ಯವಶ್ಯಕವಾಗಿ ಬೇಕಾಗಿದೆ. ಇಲ್ಲವಾದರೆ ಪ್ರಗತಿಪರ ಧೋರಣೆಯ ರೈತ ಸಂಘಟನೆಯು ಸಾಧ್ಯವಿಲ್ಲ. ಭಾರೀ ಜಮೀನ್ದಾರರೂ, ಶ್ರೀಮಂತ ರೈತರು ನಾಯಕತ್ವವಹಿಸಿ ಬಡರೈತರ ಅತೃಪ್ತಿಯನ್ನು ತಮ್ಮ ಕೀಳು ಹಿತಾಸಕ್ತಿಗಳಿಗೆ ಒಳಸಿಕೊಳ್ಳುವ ಸಾಧ್ಯತೆಯಿದೆ.

ಇಂದಿರಾ ಸರ್ಕಾರವು ಜನತೆಯ ಬಾಯಿ ಮುಚ್ಚಿಸಲು ತಕ್ಕ ಆಯುಧಗಳನ್ನು ತಯಾರಿಸಿಟ್ಟಿದೆ. ರಾಷ್ಟ್ರೀಯ ಭದ್ರತಾ ಶಾಸನದ ನಂತರ ನ್ಯಾಯಾಂಗದ ಮೇಲೆ ಹಲ್ಲೆ ಮಾಡಲಾಗಿದೆ. ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ಮೊಟಕುಗೊಳಿಸಿ ಅಧ್ಯಕ್ಷೀಯ ಮಾದರಿ ಸರ್ಕಾರವನ್ನು ಸ್ಥಾಪನೆ ಮಾಡುವತ್ತ ಹೆಜ್ಜೆ ಹಾಕುತ್ತಿದೆ. ನ್ಯಾಯಾಂಗವನ್ನು ಕಾರ್ಯಾಂಗಕ್ಕೆ ಅಧೀನ ಪಡಿಸುವ ಒರಟು ಪ್ರಯತ್ನವನ್ನು ಉಚ್ಚ ನ್ಯಾಯಾಲಯಗಳ ಮುಖ್ಯ ನ್ಯಾಯಾಧೀಶರ ವರ್ಗಾವಣೆಯಲ್ಲಿ ನೋಡಬಹುದಾಗಿದೆ. ನ್ಯಾಯ ಪಂಡಿತರು ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಇದನ್ನು ಪ್ರತಿಭಟಿಸಿದ್ದಾರೆ.

ಜನತೆಯನ್ನು ಆರ್ಥಿಕ ಬಿಕ್ಕಟ್ಟಿಗೆ ಬಲಿಪಶುಗಳನ್ನಾಗಿ ಮಾಡುತ್ತಿರುವ ಮತ್ತು ನಾಗರಿಕ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ನಡೆಯುತ್ತಿರುವ ದಾಳಿಯ ಮಧ್ಯದಲ್ಲಿ, ಪಶ್ಚಿಮ ಬಂಗಾಲ, ಕೇರಳ ಮತ್ತು ತ್ರಿಪುರಾ ಸರ್ಕಾರಗಳ ಜನಪರಧೋರಣೆ ಮತ್ತು ಯಶಸ್ಸು ಎದ್ದುಕಾಣುತ್ತಿದೆ. ಜನಸಾಮಾನ್ಯರ ಸೇವೆಯಲ್ಲಿ, ಅವರ ಹಕ್ಕುಗಳ ರಕ್ಷಣೆಯಲ್ಲಿ, ಶೋಷಿತ ಜನತೆಯ ಆರ್ಥಿಕ ಹೋರಾಟಗಳಿಗೆ ಬೆಂಬಲ ನೀಡುವುದರಲ್ಲಿ, ಕೇಂದ್ರ ಸರ್ಕಾರ ಮಲತಾಯಿ ಧೋರಣೆಯ ಆರ್ಥಿಕ ಹಂಚಿಕೆಯ ಸಂದರ್ಭದಲ್ಲಿ ಹೇಗೆ ಜನಸಾಮಾನ್ಯರಿಗೆ ನ್ಯಾಯ ದೊರಕಿಸಬಹುದು ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸಬಹುದೆಂಬುದನ್ನು ಈ ಮೂರು ಸರ್ಕಾರಗಳು ತೋರಿಸಿವೆ. ಅಲ್ಲದೇ ರಾಷ್ಟ್ರೀಯ ಭದ್ರತಾ ಶಾಸನ ಅಥವಾ ಮತ್ತಾವುದೇ ಸ್ಥಾನ ಭದ್ರತಾ ಕ್ರಮಗಳನ್ನು ಉಪಯೋಗಿಸುವುದಕ್ಕೆ ನಿರಾಕರಿಸಿ ದೇಶಾದ್ಯಂತ ಹೋರಾಟ ನಡೆಸುತ್ತಿರುವ ಪ್ರಜಾಪ್ರಭುತ್ವ ಶಕ್ತಿಗಳ ಮುಂಚೂಣಿಯಲ್ಲಿವೆ.

ಒಡನಾಡಿಗಳೇ, ನಮ್ಮ ಈಗಿನ ಹೋರಾಟ, ಇನ್ನೊಂದು ತುರ್ತು ಪರಿಸ್ಥಿತಿಗೆ ಹೊಂಚುಹಾಕುತ್ತಿರುವ ಸರ್ವಾಧಿಕಾರಿ ಶಕ್ತಿಗಳನ್ನು ಸೋಲಿಸಲು ಮತ್ತು ಪ್ರಜಾಪ್ರಭುತ್ವ ರಕ್ಷಣೆಗಾಗಿ ಜನತೆ ನಡೆಸುತ್ತಿರುವ ಹೋರಾಟದ ಅವಿಭಾಜ್ಯ ಅಂಗವಾಗಿದೆ. ಕಾರ್ಮಿಕವರ್ಗ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಈಗ ಸರ್ವಾಧಿಕಾರಿ ಶಕ್ತಿಗಳೊಡನೆ ಒಂದು ಗಂಭೀರವಾದ ಸಮರದಲ್ಲಿ ತೊಡಗಿದ್ದಾರೆ. ಅಧ್ಯಕ್ಷ ಮಾದರಿಯ ಸರ್ವಾಧಿಕಾರವನ್ನು ಹೇರಲು ತೊಡಗಿರುವ ಪ್ರಯತ್ನಗಳನ್ನು ಭಗ್ನಗೊಳಿಸಬೇಕಾಗಿದೆ.

ನನ್ನ ಮಾತುಗಳನ್ನು ಮುಗಿಸುವ ಮುನ್ನ, ದೇಶದ ಮುಂದಿರುವ ಎರಡು ಅಪಾಯಗಳ ಬಗ್ಗೆ ಪ್ರಸ್ತಾಪ ಮಾಡಬಯಸುತ್ತೇನೆ. ವಿಚ್ಛಿದ್ರಕಾರೀ ಶಕ್ತಿಗಳು ದೇಶವನ್ನು ಮತ್ತು ಜನತೆಯ ಐಕ್ಯಹೋರಾಟವನ್ನು ಒಡೆಯುವುದರಲ್ಲಿ ನಿರತವಾಗಿವೆ. ಹಿಂದೂ ಮತ್ತು ಮುಸ್ಲಿಂ ಕೋಮುವಾದಿ ಶಕ್ತಿಗಳು ಈ ಗಲಭೆಗಳಲ್ಲಿ ತಮ್ಮ ಬೇಳೆಬೇಯಿಸಿಕೊಳ್ಳುವುದಲ್ಲದೇ ದುಡಿಯುವವರ್ಗ ಮತ್ತು ಪ್ರಜಾಪ್ರಭುತ್ವವಾದಿ ಚಳುವಳಿಗಳನ್ನು ಮುರಿಯುವುದರ ಮೂಲಕ, ಆಳುವವರ್ಗಗಳ ಹಿತಾಸಕ್ತಿಗಳಿಗೆ ಬೆಂಬಲಕೊಡುತ್ತಿದ್ದಾರೆ.

ಹರಿಜನರ ವಿರುದ್ಧ ಜಾತೀಭಾವನೆ ಕೆರಳಿಸಿ ಮೇಲೆ ಹೇಳಿದ ಹಿತಾಸಕ್ತಿಗಳನ್ನೇ ರಕ್ಷಿಸುತ್ತಿದ್ದಾರೆ. ಹಿಂದುಳಿದ ಜಾತಿಗಳು, ಮುಂದುವರಿದ ಜಾತಿಗಳೆಂಬ ವಾದವನ್ನು ಮುಂದೊಡ್ಡಿ ಐಕ್ಯಹೋರಾಟಗಳಲ್ಲಿ ಒಡಕನ್ನು ತರುತ್ತಿದ್ದಾರೆ. ಜಾತಿ ಮೂಲದ ಅಸಮಾನತೆಯು ಕೆಲವು ಜೀವಂತ ಸಮಸ್ಯೆಗಳನ್ನು ಮುಂದೊಡ್ಡಿರುವ ಜಾತಿ ಆಧಾರಿತ ಚಳುವಳಿಗಳು, ಜನತೆಯನ್ನು ಎಲ್ಲ ಅಸಮಾನತೆಗಳ ವಿರುದ್ಧ ಒಗ್ಗಟ್ಟಾಗಿ ಹೋರಾಟದಲ್ಲಿ ತೊಡಗಿಸುವುದರ ಬದಲು ಅವರಲ್ಲಿ ಒಡಕನ್ನು ತರುತ್ತಿವೆ. ಇದು ಸಾಲದೆಂಬಂತೆ ನಿರುದ್ಯೋಗ ಪರಿಸ್ಥಿತಿಯ ದುರ್ಲಾಭವನ್ನು ಪಡೆಯಲು ಕೆಲವು ಮತಾಂಧ ಶಕ್ತಿಗಳು 'ಮಣ್ಣಿನ ಮಕ್ಕಳಿಗೆ-ಕೆಲಸ'ವೆನ್ನುವ ಘೋಷಣೆಯ ಮೂಲಕ ಭಾರತೀಯ ಪೌರತ್ವ ಮತ್ತು ಭಾರತ ಒಂದು ದೇಶವೆನ್ನುವ ಕಲ್ಪನೆಯನ್ನೇ ಮೊಟಕುಗೊಳಿಸುತ್ತಿವೆ. ಇಂತಹ ಎಲ್ಲ ಅಸ್ತ್ರಗಳನ್ನು ನಮ್ಮ ಚಳುವಳಿಯಲ್ಲಿ ಒಡಕುತರಲು ಉಪಯೋಗಿಸುತ್ತಿರುವುದನ್ನು ನೋಡಬಹುದಾಗಿದೆ. ಇಂತಹ ಚಟುವಟಿಕೆಗಳ ವಿರುದ್ಧ ನಾವು ಅವಿರತ ಹೋರಾಡಬೇಕಾಗಿದೆ.

ತೀವ್ರ ವಿಚ್ಛಿದ್ರವಾಗುವ ಅಪಾಯವನ್ನು ದೇಶ ಎದುರಿಸುತ್ತಿದೆ. ಅಸ್ಸಾಂ ಜನತೆ, ಅಸಮಾನ ಅವಕಾಶಗಳಿಂದಾಗಿ ಮತ್ತು ವಿದೇಶಿ ನಾಗರೀಕರು ಹೆಚ್ಚಿನ ಸಂಖ್ಯೆಯಲ್ಲಿ ಒಳನುಗ್ಗುತ್ತಿರುವುದರಿಂದ ಉಂಟಾಗಬಹುದಾದ ಪರಿಣಾಮಗಳ ಭಯದಿಂದಾಗಿ ಪ್ರತ್ಯೇಕತಾ ಚಳುವಳಿಗೆ ಬಲಿಯಾಗಿದೆ. ನಮ್ಮ ದೇಶವನ್ನು ವಿಭಜಿಸುವುದಕ್ಕಾಗಿ ಅಮೇರಿಕನ್ ಸಾಮ್ರಾಜ್ಯವಾದಿಗಳು ಗುಟ್ಟಾಗಿ ಈ ಚಳುವಳಿಗೆ ಸಹಾಯ ಮಾಡುತ್ತಿದ್ದಾರೆ ಭಾರತೀಯ ಜನತಾ ಪಕ್ಷ ಅಸ್ಸಾಂ ಚಳುವಳಿಗೆ ಬೆಂಬಲ ನೀಡಿ ಚೆಲ್ಲಾಟವಾಡುತ್ತಿದೆ. ಕಾಂಗ್ರೆಸ್ (ಐ) ಸರಕಾರವು ದೇಶದ ಐಕ್ಯತೆಯನ್ನು ಸಮರ್ಥಿಸಲು ಅಸಮರ್ಥವಾಗಿದೆ. ದೇಶದ ಐಕ್ಯತೆಯನ್ನು ಕಾಪಾಡಿಕೊಳ್ಳದಿದ್ದರೆ ಸ್ವಾತಂತ್ರ ಉಳಿಯುವುದಿಲ್ಲ. ಇತರ ಪ್ರಜಾಪ್ರಭುತ್ವ ಶಕ್ತಿಗಳ ಸಹಕಾರದೊಂದಿಗೆ ದೇಶದ ಒಗ್ಗಟ್ಟು ಹಾಗೂ ಐಕ್ಯತೆಯನ್ನು ಕಾಪಾಡುವುದು ಕಾರ್ಮಿಕ ವರ್ಗದ ಕರ್ತವ್ಯವಾಗಿದೆ.

ಹಿಂದೂಮಹಾಸಾಗರದಲ್ಲಿ ಭಾರೀ ಪ್ರಮಾಣದಲ್ಲಿ ನೌಕನೆಲೆಗಳನ್ನು ಸ್ಥಾಪಿಸಿರುವ ಅಮೇರಿಕನ್ ಸಾಮ್ರಾಜ್ಯಶಾಹಿಯು ಭಾರತಕ್ಕೆ ಬಲುದೊಡ್ಡ ಅಪಾಯಕಾರಿಯಾಗಿ ಮತ್ತೊಮ್ಮೆ ಕಾಣಿಸುತ್ತದೆ. ಅವರು ಪಾಕಿಸ್ತಾನಕ್ಕೆ ಭಾರೀ ಪ್ರಮಾಣದಲ್ಲಿ ಶಸ್ತ್ರಾಸ್ತ್ರ ಸರಬರಾಜು ಮಾಡುತ್ತಿರುವುದು ಎರಡೂ ದೇಶಗಳಿಗೆ ಯುದ್ಧ ತಂದು ಹಾಕಲು. ಬಿಜೆಪಿಯವರು ಪಾಕಿಸ್ತಾನದ ಮಿಲಿಟರಿ ಆಡಳಿತದ ಬಗ್ಗೆ ಶಿಫಾರಸು ಮಾಡುತ್ತಿರುವುದು ಮತ್ತು ಎರಡೂ ದೇಶಗಳ ನಡುವೆ ಯುದ್ಧ ನಡೆಯುವಂತೆ ಮಾಡಲು ಅಮೇರಿಕನ್ ಸಾಮ್ರಾಜ್ಯವಾದಿಗಳು ಹೂಡಿರುವ ಸಂಚನ್ನು ಅಲ್ಲಗಳೆಯುತ್ತಿರುವುದು ಅಮೇರಿಕನ್ ಹಿತಾಸಕ್ತಿಗಳಿಗೆ ಸಹಾಯಕವಾಗಿದೆ.

ಎಲ್ಲ ಸಾಮ್ರಾಜ್ಯವಾದಿಗಳ ಪ್ರಯತ್ನಗಳನ್ನು, ಅಮೇರಿಕಾದ ಸಂಚನ್ನು ಕಾರ್ಮಿಕ ವರ್ಗ ಭಗ್ನಗೊಳಿಸಬೇಕಾಗಿದೆ. ವಿಶ್ವಶಾಂತಿಗಾಗಿ ಶ್ರಮಿಸಬೇಕಾಗಿದೆ. ದೃಢ ನಿರ್ಧಾರದಿಂದ ಸರ್ವಾಧಿಕಾರಿ ಶಕ್ತಿಗಳನ್ನು ಸೋಲಿಸಬೇಕಾಗಿದೆ. ನಮ್ಮ ಸಂಘಗಳು ಕಾರ್ಮಿಕನ ಮೇಲಾಗುವ ದಿನ ನಿತ್ಯದ ದಾಳಿಯನ್ನು ಹಿಮ್ಮೆಟ್ಟಿಸಬೇಕಾಗಿದೆ,

ಶೋಷಣೆಯನ್ನು ಕೊನೆಗೊಳಿಸಲು ಮತ್ತು ಜೀವನ ಮಟ್ಟ ಸುಧಾರಿಸಿಕೊಳ್ಳಲು ಬೇರೆ ವಿಭಾಗಗಳ ಜನತೆಯೊಂದಿಗೆ ಐಕ್ಯ ಹೋರಾಟಗಳಲ್ಲಿ ಸಹಭಾಗಿಗಳಾಗಬೇಕಾಗಿದೆ.

●

## ಸುಳ್ಳು ಅಪಾದನೆಯ ಮೇಲೆ ಕಾರ್ಮಿಕರ ಬಂಧನ

ದಿನಾಂಕ 12-12-80ರಿಂದ ಮುಷ್ಕರದಲ್ಲಿರುವ ಬೆಂಗಳೂರಿನ ಯಶವಂತಪುರದಲ್ಲಿರುವ ಇಂಟರ್‌ಕಾನ್ ಕಾರ್ಮಿಕರನ್ನು ಪೋಲೀಸರು ಸುಳ್ಳು ಆಪಾದನೆಯ ಮೇಲೆ 18-2-81ರಂದು ಬಂಧಿಸಿ ಬಿಡುಗಡೆ ಮಾಡಿದ್ದಾರೆ.

ಡಿಸೆಂಬರ್ 12, 80ರಂದು ಬೆಂಗಳೂರಿನಲ್ಲಿ ನಡೆದ ರೈತಕಾರ್ಮಿಕ ಜಾಥಾದಲ್ಲಿ ಪಾಲ್ಗೊಂಡಿದ್ದಕ್ಕಾಗಿ ಇಂಟರ್‌ಕಾನ್ ಆಡಳಿತವರ್ಗದವರು ಕಾರ್ಮಿಕರ ಮೇಲೆ ಶಿಸ್ತಿನ ಕ್ರಮ ಕೈಗೊಂಡಿದ್ದರು. ಈ ಕ್ರಮವನ್ನು ಪ್ರತಿಭಟಿಸಿ ಮುಷ್ಕರ ನಡೆಯುತ್ತಿದೆ.

18-2-81ರಂದು, ಆಡಳಿತವರ್ಗದವರು ಕೆಲವು ಗೂಂಡಾಗಳನ್ನು ಕರೆದುಕೊಂಡುಬಂದು ಮುಷ್ಕರನಿರತ ಕಾರ್ಮಿಕರ ಮೇಲೆ ಹಲ್ಲೆ ನಡೆಸಿದರು. ಅಲ್ಲದೇ ಶಾಂತಿಯುತ ಮುಷ್ಕರ ನಡೆಸುತ್ತಿರುವ ಕಾರ್ಮಿಕರ ಮೇಲೆಯೇ ದೂರು ಕೊಟ್ಟರು ಮಾಲೀಕವರ್ಗದ ಭಂಟರಾದ ಪೋಲೀಸರು ಗೂಂಡಾಗಳ ವಿರುದ್ಧ ಕ್ರಮತೆಗೆದುಕೊಳ್ಳದೇ ಕಾರ್ಮಿಕರನ್ನೇ ಬಂಧಿಸಿದರು. ನಂತರ ಅಂದು ಸಾಯಂಕಾಲ ಸಂಘದ ಪದಾಧಿಕಾರಿಗಳು ಮಧ್ಯಪ್ರವೇಶಿಸಿ ಬಿಡುಗಡೆ ಮಾಡಿದರು.

ಪೋಲೀಸರು ಮಾಲೀಕವರ್ಗದ ಪರ ಧೋರಣೆಯನ್ನು ಕೈಬಿಡಬೇಕೆಂದು ಸಂಘದ ಪರವಾಗಿ ಕಾಂ. ಚಂದ್ರಶೇಖರ ಎಚ್ಚರಿಸಿದ್ದಾರೆ.

REG. KRNB-368 MAG (2) PRB DECR 319/78-79


# ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಮುಷ್ಕರ: ಹೊಸ ತಿರುವು

ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಮುಷ್ಕರ ಪ್ರಾರಂಭವಾಗಿ 70 ದಿನಗಳ (ಡಿಸೆಂಬರ್ 26 ರಿಂದ ಪ್ರಾರಂಭ) ಮೇಲಾಯಿತು. ಇನ್ನೂ ವರೆಗೆ ಯಾವದೇ ಇತ್ಯರ್ಥಕ್ಕೆ ಬರಲಾಗಿಲ್ಲ. ಜೆಎಸಿ ನಾಯಕರ ದೆಹಲಿ ಯಾತ್ರೆಯೂ ಪ್ರಯೋಜನಕಾರಿಯಾಗಿಲ್ಲ. ಪ್ರಧಾನಿ ಬೆಂಗಳೂರಿಗೆ ಬಂದಾಗ ಸಲ್ಲಿಸಿದ ಮನವಿಗೆ, ಮುಖ್ಯಮಂತ್ರಿಯ ಬಳಿ 4-5 ಸಲ ನಡೆದ ಮಾತುಕತೆಗೆ ಫಲ ದೊರೆತಿಲ್ಲ.

ಮುಷ್ಕರ ಸದೆಬಡಿಯಲು ಸರಕಾರ ನಾನಾ ಕುತಂತ್ರಗಳನ್ನು ಹೂಡಿತು. ಜಂಟಿ ಕ್ರಿಯಾ ಸಮಿತಿಯ ನಾಯಕರನ್ನು ಬಂಧಿಸಿತು. ಸೌಹಾರ್ದ ಸಮಿತಿಯ ಸಭೆಗೆ ಅನುಮತಿ ಕೊಡಲಿಲ್ಲ. ಸರ್ಕಾರ ಯಾವ ಮಟ್ಟಕ್ಕೆ ತಲುಪಿದೆಯೆಂದರೆ ಎಚ್.ಎ.ಎಲ್. ಬಳಿ ಸಿ.ಐ.ಟಿ.ಯು. ನೇತೃತ್ವದಲ್ಲಿ, ಮುಷ್ಕರ ನಿರತ ಕಾರ್ಮಿಕರಿಗೆ ಧಾನ್ಯ ವಿತರಣೆ ಮಾಡತೊಡಗಿದಾಗ ಅದಕ್ಕೂ ಅಡ್ಡಿ. ಆದರೂ ಮುಷ್ಕರ ನಿಂತಿಲ್ಲ. ರಾಜ್ಯ ಇಂಟಕ್ ನಾಯಕ ಎಫ್. ಎಂ. ಖಾನ್ ಆಡಳಿತ ವರ್ಗದ ಏಜಂಟನಂತೆ ವರ್ತಿಸುತ್ತಿದ್ದಾರೆ. ಬೆಂಗಳೂರು ನಗರದಲ್ಲಿ ಗೋಡೆಗಳ ಮೇಲೆ ದೊಡ್ಡ ದೊಡ್ಡ ಭಿತ್ತಿ ಪತ್ರಗಳು ಖಾನ್‌ರ ಹೆಸರಿನಿಂದ ಕಂಡುಬಂದವು. ಭಿತ್ತಿ ಪತ್ರಗಳಲ್ಲಿದ್ದ ವಿಷಯ ಕೆಲಸಕ್ಕೆ ಹಾಜರಾಗಲು ಮನವಿ. ಮನವಿ ಮಾಡಿದವರು ಕಾರ್ಮಿಕ ನಾಯಕ(?) ಎಫ್. ಎಂ. ಖಾನ್. ಇದೇ ಖಾನ್‌ರ ಹಿಂಬಾಲಕರು ಜೆ.ಎ.ಸಿ. ಆಫೀಸಿನ ಮೇಲೆ ದಾಳಿ ಮಾಡುವ ಎದೆಗಾರಿಕೆ ತೋರಿದ್ದಾರೆ. ಶ್ರೀ ರಾಜ್‌ಗೋಪಾಲ್‌ರ ಮೇಲೆ ಹಲ್ಲೆ ಮಾಡಿದ್ದಾರೆ.

ಹೊಟ್ಟೆಗಿಲ್ಲದ ಪರಿಸ್ಥಿತಿಯಲ್ಲೂ ಕಾರ್ಮಿಕರು ಶಾಂತಯುತವಾಗಿದ್ದಾರೆ. ಇದನ್ನು ಖಾನ್ ಗೂಂಡಾಗಳು ದೌರ್ಬಲ್ಯವೆಂದು ತಿಳಿದಿದ್ದಾರೆ. ಈ ಹಲ್ಲೆ ಕಾರ್ಮಿಕ ವರ್ಗದ ಮೇಲಾದ ಹಲ್ಲೆ. ಸರ್ವಾಧಿಕಾರಿ ಶಕ್ತಿಗಳ ನಾಚಿಗ್ಗೇಡಿನ ಕೃತಿಗೆ ಸ್ಪಷ್ಟ ನಿದರ್ಶನ. ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಯ ಬಗ್ಗೆ ಕಾಳಜಿ ಎಲ್ಲರೂ ಈ ಕೃತ್ಯವನ್ನು ಉಗ್ರವಾಗಿ ಖಂಡಿಸಬೇಕು ಪ್ರತಿಭಟಿಸಬೇಕು.

ಮುಖ್ಯಮಂತ್ರಿ ಗೂಂಡೂರಾಯರಿಂದ ಸಂಧಾನಮಾಡಿಸುವ ನಾಟಕ. ಮುಖ್ಯಮಂತ್ರಿ ನಾಟಕಮಾಡುತ್ತಿದ್ದಾರೆಂದು ಕಾಂ. ಸೂರ್ಯನಾರಾಯಣ ರಾಯರು ಮೊದಲೇ ಸ್ಪಷ್ಟಪಡಿಸಿದ್ದರು. ಈ ತಂತ್ರವನ್ನು ಬಯಲಿಗೆಳೆದಿದ್ದರು. ಸಂಕಷ್ಟದಲ್ಲಿರುವ ಕಾರ್ಮಿಕಬಾಂಧವರಿಗೆ ಧಾನ್ಯವಿತರಣೆ ಮಾಡಲು ಸಿ.ಐ.ಟಿ.ಯು. ಸಂಘಗಳಿಗೆ ಕರೆ ನೀಡಿದ್ದರು. ಈ ಕರೆಗೆ ಓಗೊಟ್ಟು ಸಿ.ಐ.ಟಿ.ಯು ನೇತೃತ್ವದಲ್ಲಿರುವ ಕಾರ್ಮಿಕರು ಮೂಟೆಗಟ್ಟಲೇ ಧಾನ್ಯ ಸಂಗ್ರಹಿಸಿದರು. ಬಿ.ಇ.ಎಲ್., ಎಚ್.ಎ.ಎಲ್., ಐ.ಟಿ.ಐ., ಕಾರ್ಖಾನೆಗಳ ಬಳಿ ಸಹಸ್ರ ಸಹಸ್ರ ಕಾರ್ಮಿಕರಿಗೆ ತಲಾ ಐದು ಕೆ.ಜಿ.ಯಂತೆ ಧಾನ್ಯ ಹಂಚಿದರು. ಎಲ್ಲೈಸಿ ಮತ್ತು ಮೈಕೋ ಕಾರ್ಮಿಕರ ನೆರವು ಸ್ಮರಣೀಯ. ಕೃಷ್ಣರಾಜಪುರದಲ್ಲಿರುವ ಸಿ.ಐ.ಟಿ.ಯು. ಸಂಘಗಳಾದ ಹರ್ಬರ್ಟ್ ಇಂಡಿಯಾ, ಸೂರಿ ಆ್ಯಂಡ್ ನಾಯರ್ ಜಿ. ಆರ್. ಇಂಡಸ್ಟ್ರೀಸ್, ಶಿಮಮಣಿ ಮೊದಲಾದ ಕಾರ್ಖಾನೆಗಳ ಕಾರ್ಮಿಕರು ಸ್ವಯಂಸ್ಫೂರ್ತಿಯಿಂದ ಧಾನ್ಯ ಕೊಟ್ಟರು. ಸ್ವತಃ ತಾವೇ ಕೊಂಡೊಯ್ದು ಹಂಚಿದರು. ಈ ನೆರವನ್ನು ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರು ಗಮನದಲ್ಲಿಡಬೇಕು. ತಮ್ಮ ಹಿಂದೆ ರಾಜ್ಯದ ಕಾರ್ಮಿಕ ವರ್ಗ ಇದೆ ಎಂಬುದನ್ನು ಮರೆಯಬಾರದು. ಯಾವುದೇ ಸಂದರ್ಭದಲ್ಲಿ ಹಿಂತೆಗೆಯಬಾರದು.

ಮಾರ್ಚ್ 11, ಭಾರತದ ಕಾರ್ಮಿಕ ವರ್ಗ, ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಬೆಂಬಲಾರ್ಥವಾಗಿ ಸಾಂಕೇತಿಕ ಮುಷ್ಕರಮಾಡುವವರಿದ್ದಾರೆ. ಇಂದಿರಾ ಸರ್ಕಾರದ ಕಾರ್ಮಿಕ ವಿರೋಧಿ, ಜನವಿರೋಧಿ ಧೋರಣೆಯನ್ನು ಪ್ರತಿಭಟಿಸಲಿದ್ದಾರೆ.

ಕಾರ್ಮಿಕನಾಯಕ ಎಫ್.ಎಂ. ಖಾನ್ ಒಂದು ಕರಪತ್ರ ಹಂಚಿದ್ದರು. ಬಿ.ಎಚ್.ಇ.ಎಲ್. ಒಪ್ಪಂದಕ್ಕೆ ಇಂಟಕ್ ಕಾರಣವಂತೆ. ಸಿ.ಐ.ಟಿ.ಯು ಪ್ರಧಾನಕಾರ್ಯದರ್ಶಿ ಕಾಂ. ರಾಮಮೂರ್ತಿಯವರ ಮೇಲೆ ನೇರ ಆಪಾದನೆಮಾಡಿದ್ದಾರೆ. ಈ ಹಸೀ ಸುಳ್ಳನ್ನು ಪತ್ರಿಕಾಗೋಷ್ಠಿಯಲ್ಲಿ ಕಾಂ. ಸೂರ್ಯನಾರಾಯಣ ರಾಯರು ಉಗ್ರವಾಗಿ ಖಂಡಿಸಿದ್ದಾರೆ. ಖಾನ್‌ರ ಗೋಮುಖ ವ್ಯಾಘ್ರ ನೀತಿಯ ಬಗ್ಗೆ ಕಾರ್ಮಿಕರನ್ನು ಎಚ್ಚರಿಸಿದ್ದಾರೆ. ಕಾರ್ಮಿಕಐಕ್ಯತೆಯನ್ನು ಮುರಿಯುವ ಈ ಮನೆಮುರುಕ ನೀತಿಯನ್ನು ಬಯಲಿಗೆಳೆದಿದ್ದಾರೆ.

ಬೇಗನೇ ಇತ್ಯರ್ಥಕ್ಕೆ ಬರದಿದ್ದರೆ ರಾಜ್ಯಾದ್ಯಂತ ಚಳುವಳಿ ಪ್ರಾರಂಭಿಸುವುದಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಎಂ. ಕೆ. ಭಟ್ ಹೇಳಿಕೆ ನೀಡಿದ್ದಾರೆ. ಇತರ ವಿರೋಧಿ ಪಕ್ಷಗಳ ಸಹಕಾರದಿಂದ ರಾಜ್ಯಮಟ್ಟದಲ್ಲಿ ಮುಷ್ಕರ, ಬಂದ್ ಮತ್ತು ನಿಧಿಸಂಗ್ರಹಿಸಲು ಐಕ್ಯತಾ ಕ್ರಮ ಅನುಸರಿಸುವುದಾಗಿ ತಿಳಿಸಿದ್ದಾರೆ. ಡಿ. ರಾಜ್‌ಗೋಪಾಲ್‌ರ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿದ್ದಾರೆ.

ದೇಶದಲ್ಲಿ ಫ್ಯಾಸಿಸ್ಟ್ ಶಕ್ತಿಗಳು ಕೊಬ್ಬುತ್ತಿವೆ. ತಮ್ಮ ಧೋರಣೆ, ನಿಲುವನ್ನು ಒಪ್ಪದಿರುವವರ ಮೇಲೆ ಗೂಂಡಾಗಿರಿ ನಡೆಸುತ್ತಿದ್ದಾರೆ. ದಿನ ನಿತ್ಯ ನಡೆಯುವ ದರೋಡೆ, ಲೂಟಿ, ಮಾನಭಂಗ, ನಿರಪರಾಧಿಗಳ ಮೇಲೆ ಹಲ್ಲೆ, ಹರಿಜನರ ಕೊಲೆ, ಹೋರಾಡುತ್ತಿರುವ ಕಾರ್ಮಿಕರನ್ನು-ಜನಕೋಟಿಯನ್ನು ಸದೆ ಬಡಿಯುವದು ಇವೆಲ್ಲ ಇಂದಿರಾ ಆಡಳಿತಕ್ಕೆ ಕೈಗನ್ನಡಿ.

ಒಂದಂತೂ ಸ್ಪಷ್ಟ. ಬಲಾತ್ಕಾರದಿಂದ ಜನರ ಅಭಿವ್ಯಕ್ತಿಯನ್ನು ಹತ್ತಿಕ್ಕಲು ಯತ್ನಿಸಿದರೆ ಖಂಡಿತ ಉಳಿಗಾಲವಿಲ್ಲ. ಇದನ್ನ ಇತಿಹಾಸ ಸ್ಪಷ್ಟಪಡಿಸಿದೆ. ಮರಳಿನ ಮೇಲೆ ಮನೆ ಕಟ್ಟಿರುವ ಕಾಂಗ್ರೆ ಅಧಿಕಾರ ಕುಸಿದು ಬೀಳುವದು ಖಂಡಿತ.

ಹೋರಾಟ ಮಾಡುತ್ತಿರುವ ಕಾರ್ಮಿಕರಿಗೆ ಬೆಂಬಲ ನೀಡುವದು ಪ್ರಜಾಪ್ರಭುತ್ವ ಶಕ್ತಿಗಳ ಆದ್ಯ ಕರ್ತವ್ಯ. ದಿವಂಗತ ಸಾಹಿರ್ ಲೂಧಿಯಾನ್ವಿ ಒಂದೆಡೆ ಹೇಳಿದಂತೆ "ಸುಬಹ್ ಕಿ ಮಂಜಿಲ್ ದೂರ್ ನಹಿ, ಥಕ್ ಮತ್ ಜಾನಾ (ಮುಂಜಾವಿನ ಆಗಮನ ದೂರವಿಲ್ಲ, ದಣಿಯಬೇಡ). ದಾಳಿ, ದಬ್ಬಾಳಿಕೆಗಳನ್ನು ಕಾರ್ಮಿಕರು ಮುನ್ನುಗ್ಗಲೇ ಬೇಕು. ಜನತಂತ್ರ ವಿರೋಧಿ ಸರ್ಕಾರದ ನಿಲುವನ್ನು ಬಗ್ಗು ಬಡಿಯಲೇ ಬೇಕು.

"ಗೌರವಾನ್ವಿತ ಒಪ್ಪಂದವಾಗುವ ವರೆಗೆ ಮುಷ್ಕರ ನಿಲುಗಡೆ ಇಲ್ಲ; ಗೂಂಡಾಗಿರಿಗೆ ಜಗ್ಗುವದಿಲ್ಲ"ವೆಂಬ ಕಾರ್ಮಿಕರ ನಿರ್ಧಾರ ಅತ್ಯಂತ ಸೂಕ್ತ ಮತ್ತು ಸಕಾಲಿಕ.

—ಚಂದ್ರು

# ಕಾಂಗ್ರೆ ಗೂಂಡಾಗಳಿಂದ ದಾಳಿ

ದಾಂಡೇಲಿಯ ಕಾಂಗ್ರೆ ಅಧ್ಯಕ್ಷ ಆರ್. ಜಿ. ಶೆಟ್ಟಿ ನೇತೃತ್ವದಲ್ಲಿ ಸುಮಾರು 40 ಸಶಸ್ತ್ರ ಗೂಂಡಾಗಳು ದಿ. 27-2-1981ರಂದು ದಾಂಡೇಲಿಯ ಪ್ರಥಮ ನಾಗರಿಕ ಕಾಂ. ಸ್ಥಳೇಕರ್‌ರ ಮೇಲೆ ದಾಳಿ ಮಾಡಿದ್ದಾರೆ.

ದಿನಾಂಕ 27ರಂದು ಮುನಿಸಿಪಾಲಿಟಿಯ ಸಭೆಯು ನಡೆಯುತ್ತಿದ್ದಾಗ, ಈ ಘಟನೆ ಸಂಭವಿಸಿದೆ. ಕಾಂಗ್ರೆ ಕೌನ್ಸಿಲರುಗಳು ಈ ಗೂಂಡಾಗಳಿಗೆ ಪ್ರೋತ್ಸಾಹ ಕೊಟ್ಟರು. ಕಾಂ. ಸ್ಥಳೇಕರರನ್ನು ಸುತ್ತುಗಟ್ಟಿ ಎಳೆದಾಡಿದರು. ಮುನಿಸಿಪಾಲಿಟಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆಗೆ ಒತ್ತಾಯಿಸಿದರು.

ಈ ಆಘಾತಕರ ವಾರ್ತೆ ದಾಂಡೇಲಿಯಲ್ಲಿ ಹರಡಿದ ಕೂಡಲೇ ನಗರದ ಜನತೆ ಮುನಿಸಿಪಾಲಿಟಿಗೆಧಾವಿಸಿದರು. ಸುತ್ತುವರಿದ ಅಪಾರ ಜನರನ್ನು ಕಂಡ ಕಾಂಗ್ರೆ ರೌಡಿಗಳು ಕಾಲಿಗೆ ಬುದ್ಧಿ ಹೇಳಿದರು.

1979ರ ಜೂನ್‌ನಲ್ಲಿ ದಾಂಡೇಲಿಯ ಮುನಿಸಿಪಾಲಿಟಿಗೆ ಚುನಾವಣೆ ಜರುಗಿ ಒಟ್ಟು 19 ಕೌನ್ಸಿಲ್ ಸ್ಥಾನಗಳಲ್ಲಿ 10 ಸಿ.ಪಿ.ಐ.(ಎಂ) ಅಭ್ಯರ್ಥಿಗಳು ಜಯಗಳಿಸಿದ್ದರು. ಕಾಂ. ಸ್ಥಳೇಕರರು ಅಧ್ಯಕ್ಷರಾಗಿ ಚುನಾಯಿತರಾದರು. ಜನತೆಯಿಂದ ತಿರಸ್ಕರಿಸಲ್ಪಟ್ಟಿದ್ದ ಕಾಂಗ್ರೆ ಅಭ್ಯರ್ಥಿಗಳು ಸಿ.ಪಿ.ಐ.(ಎಂ) ನೇತೃತ್ವದ ಅಧಿಕಾರಿ ವರ್ಗವನ್ನು ಅಧಿಕಾರ ಸ್ಥಾನದಿಂದ ಕೆಳಗಿಳಿಸಲು ಈ ನೀಚ ತಂತ್ರ ಅನು ಅನುಸರಿಸಿದ್ದಾರೆ. ದಾಂಡೇಲಿಯ ಮುನಿಸಿಪಾಲಟಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳಿಗೆ ತಡೆಯೊಡ್ಡುತ್ತಿದ್ದಾರೆ.

ಹುಬ್ಬಳ್ಳಿಯಲ್ಲಿ ಪ್ರಕಟಿಸಿದ ಪತ್ರಿಕಾ ಪ್ರಕಟನೆಯಲ್ಲಿ ಕಾಂ. ಸ್ಥಳೇಕರರು ಈ ವಿಷಯ ತಿಳಿಸಿ, ದಾಂಡೇಲಿಯ ಜನರನ್ನು ವಿಶೇಷವಾಗಿ ಕಾರ್ಮಿಕರನ್ನು ಕಾಂಗ್ರೆ ದಾಳಿಯನ್ನು ಹಿಮ್ಮೆಟ್ಟಿಸಿದ್ದಕ್ಕಾಗಿ ಅಭಿನಂದಿಸಿದ್ದಾರೆ.

ಕಾಂಗ್ರೆ ಗೂಂಡಾಗಳನ್ನು ಬಂಧಿಸುವ ಬದಲು ಪೋಲೀಸರು ಕಾಂ. ಸ್ಥಳೇಕರ ಮತ್ತು ಇತರ ಕೆಲವರನ್ನು ಬಂಧಿಸಿ ಸುಳ್ಳು ಕೇಸುಗಳನ್ನು ದಾಖಲು ಮಾಡಿದ್ದಾರೆ.

ದಾಂಡೇಲಿಗೆ ಭೇಟಿಯಿತ್ತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ಕಾಂ. ವಿ.ಜೆ.ಕೆ. ನಾಯರ್ ಮತ್ತು ಧಾರವಾಡ ಜಿಲ್ಲಾ ಪಕ್ಷದ ಕಾರ್ಯದರ್ಶಿ ಕಾಂ. ಹಳಕಟ್ಟಿಯವರು ಈ ದಾಳಿಯನ್ನು, ಪೋಲೀಸರ ನಿಷ್ಕ್ರಿಯತೆಯನ್ನು ಉಗ್ರವಾಗಿ ಖಂಡಿಸಿದ್ದಾರೆ. ಕಾಂ. ಸ್ಥಳೇಕರರ ಮೇಲೆ ದಾಳಿ ಮಾಡಿದ ಕಾಂಗ್ರೆ ಗೂಂಡಾಗಳನ್ನು ಇನ್ನೂವರೆಗೆ ಬಂಧಿಸದಿರುವ ಬಗ್ಗೆ ವಿಷಾದಿಸಿದ್ದಾರೆ.

ಕಾಂ. ಸ್ಥಳೇಕರ ನೇತೃತ್ವದ ಮುನಿಸಿಪಾಲಟಿ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿರುವುದನ್ನು ಸಹಿಸದ ಪಟ್ಟಭದ್ರ ಹಿತಾಸಕ್ತಿಗಳು ಈ ಘಟನೆಯ ಹಿಂದಿದ್ದಾರೆ ಎಂದು ಆಪಾದಿಸಿ ಇಂತಹ ಘಟನೆಗಳು ಮುಂದುವರೆದಿದ್ದೇ ಆದರೆ ಗೂಂಡಾಗಳಿಗೆ ತಕ್ಕರೀತಿಯಲ್ಲಿ ಉತ್ತರಿಸಬೇಕಾದೀತೆಂದು ಎಚ್ಚರಿಸಿದ್ದಾರೆ.

●

## ……..ರಾಜ್ಯಸಮಿತಿ ಕರೆ

[1ನೇ ಪುಟದಿಂದ]

ಯನ್ನು ಬಲಪಡಿಸಲು ಪ್ರಗತಿಪರ ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಕರೆ ಇತ್ತಿತು.

### "ಲಕ್ಷ ರೂಪಾಯಿ ಪಾರ್ಟಿ ನಿಧಿ"

ಪಕ್ಷದ ಅಖಿಲಭಾರತ ಪ್ಲೀನಮ್‌ನಲ್ಲಿ ಮತ್ತು ಇತ್ತೀಚೆಗೆ ಮೈಸೂರಿನಲ್ಲಿ ನಡೆದ ರಾಜ್ಯ ಪ್ಲೀನಮ್‌ನಲ್ಲಿ ಕೈಗೊಂಡ ಸಂಘಟನಾ ನಿರ್ಣಯಗಳನ್ನು ಜಾರಿಗೊಳಿಸಲು ಸಾಧ್ಯವಾಗುವಂತೆಮಾಡಲು ಮತ್ತು ಪಕ್ಷದ ರಾಜ್ಯದ ಸಮಿತಿಯ ಕೆಲಸಕಾರ್ಯಗಳನ್ನು ಚುರುಕುಗೊಳಿಸಲು ಸಾಧ್ಯವಾಗುವಂತೆಮಾಡಲು ಹೆಚ್ಚಿನ ಹಣಕಾಸು ಅವಶ್ಯ. ಹಾಗೆಯೇ ಪಕ್ಷದ ಸಂಘಟನೆಯನ್ನು ಈಗಿರುವೆಡೆ ಬಲಿಷ್ಟಗೊಳಿಸಿ, ಇತರೆಡೆಗಳಿಗೆ ಪಸರಿಸುವಂತೆಮಾಡಲೂ ಹಣಕಾಸು ಅಗತ್ಯಬೇಕು. ತನ್ನ ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಾಗುವಂತೆ ಮಾಡಲು 1981ನೇ ಇಸವಿಯಲ್ಲಿ ಒಂದು ಲಕ್ಷ ರೂಪಾಯಿಯ ರಾಜ್ಯ ಸಮಿತಿ ನಿಧಿ ಸಂಗ್ರಹಿಸಲು ರಾಜ್ಯ ಸಮಿತಿ ಸಭೆಯು ತೀರ್ಮಾನಿಸಿದೆ. ಬೇರೆಬೇರೆ ಜಿಲ್ಲೆಗಳಿಗೆ ಕೋಟಾವನ್ನು ನಿಗದಿ ಮಾಡಲಾಗಿದೆ. 1981 ಸೆಪ್ಟೆಂಬರ್ 30ರೊಳಗೆ ಈ ನಿಧಿ ಸಂಗ್ರಹದ ಕೆಲಸವನ್ನು ಮುಗಿಸಬೇಕಾಗಿದೆ. ಪಕ್ಷದ ಸದಸ್ಯರು, ಹಿತೈಷಿಗಳು, ಸಾಮೂಹಿಕ ಸಂಘಟನೆಗಳು ಮತ್ತು ಜನತೆಯಿಂದ ನಿಧಿ ಸಂಗ್ರಹಿಸಿ, ಕೋಟಾವನ್ನು ಭರ್ತಿಮಾಡಿ, ರಾಜ್ಯ ಸಮಿತಿಯು ಹಾಕಿಕೊಂಡಿರುವ ಯೋಜನೆಗಳನ್ನು ಕಾರ್ಯಗತ ಗೊಳಿಸಲು ಸಹಕಾರಿಸಲು ರಾಜ್ಯ ಸಮಿತಿಯು ಕರೆ ಈಯುತ್ತದೆ.

●

## ತಿದ್ದುಪಡಿ

1. 1-3-81ರಪತ್ರಿಕೆಯ ಮುಖಪುಟದ ಜಿಲ್ಲಾ ಕೇಂದ್ರಗಳಲ್ಲಿ ಸತ್ಯಾಗ್ರಹ ಎಂಬ ತಲೆಬರಹದ ಲೇಖನದಲ್ಲಿ ಪ್ರಥಮ ಸಾಲಿನಲ್ಲಿ "ಮಾರ್ಚ್ 31ರಂದು ಜನತಂತ್ರರಂಗದ ನೇತೃದಲಿ" ಎಂದಿದೆ ಇದನ್ನು ಮಾರ್ಚ್ 31ರ ಬದಲು ಮಾರ್ಚ್ 23 ಎಂದು,

2. ಈ ವಾರದ (8-3-81) ಪತ್ರಿಕೆಯಲ್ಲಿ 3ನೇ ಪುಟದ "ಮಹಿಳೆಯನ್ನು ಕುರಿತು" ಎಂಬ ಲೇಖನದ ಪ್ರಥಮ ಪ್ಯಾರಾದಲ್ಲಿ ಅಖಿಲಭಾರತ ಮಹಿಳಾ ಸಮ್ಮೇಳನ ಮಾರ್ಚ್ 8ರಿದ ಎಂದಿದೆ. ಇದನ್ನು ಮಾರ್ಚ್ 10ರಿಂದ ಎಂದು ಓದಿಕೊಳ್ಳಬೇಕಾಗಿ ವಿನಂತಿ.

ಈ ಅಚಾತುರ್ಯಕ್ಕೆ ನಾವು ವಿಷಾದ ವ್ಯಕ್ತಪಡಿಸುತ್ತೇವೆ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT